# ಅಧ್ಯಾಯ ೧

# ಪ್ರಾಸ್ತಾವಿಕ

**ಹೆಸರಿನ ಮೂಲ:** ಕೋಲಾರ ಜಿಲ್ಲೆಯ ಪ್ರಾಚೀನತೆಯನ್ನು ಪ್ರತಿಪಾದಿಸಲು ಹಲವಾರು ಐತಿಹ್ಯಗಳಿವೆ. ಕೋಲಾರವು ಪ್ರಾಚೀನ ಕಾಲದಲ್ಲಿ ಕೋಲಾಹಲಪುರ, ಕುವಲಾಲ, ಕೋಳಾಲ ಮುಂತಾದ ಹೆಸರುಗಳಿಂದ ಕರೆಯಲ್ಪಟ್ಟಿದೆ. ಕಾರ್ತವೀರ್ಯಾರ್ಜುನನ ಮೇಲೆ ಪರಶುರಾಮನು ಸೇಡು ತೀರಿಸಿಕೊಂಡ ಕೋಲಾಹಲವೇ ಈ ಸ್ಥಳಕ್ಕೆ ಕೋಲಾರವೆಂಬ ಹೆಸರು ಬರಲು ಕಾರಣ ಎಂಬ ಕಥೆ ಇದೆ. ಕಾರ್ತವೀರ್ಯಾರ್ಜುನನು ಹಿಂದೆ ಈ ಪ್ರದೇಶದಲ್ಲಿ ದೊರೆಯಾಗಿದ್ದಾಗ ಒಮ್ಮೆ ಜಮದಗ್ನಿ ಮಹರ್ಷಿಯು ಅವನನ್ನು ಸುರಭಿ ಎಂಬ ಗೋವಿನ ಸಹಾಯದಿಂದ ಸತ್ಕರಿಸುವನು. ಕಾರ್ತವೀರ್ಯನು ಆ ಗೋವನ್ನು ತನಗೆ ಕೊಡಬೇಕೆಂದು ಜಮದಗ್ನಿ ಮಹರ್ಷಿಯನ್ನು ಪೀಡಿಸಿದಾಗ, ಜಮದಗ್ನಿಯು ಕೊಡಲು ನಿರಾಕರಿಸುತ್ತಾನೆ. ಕಾರ್ತವೀರ್ಯನು ಗೋವನ್ನು ಬಲತ್ಕಾರವಾಗಿ ತೆಗೆದುಕೊಂಡು ಹೋಗಲು ಪ್ರಯತ್ನಿಸಿದಾಗ, ಜಮದಗ್ನಿಯ ಮಗ ಪರಶುರಾಮನಿಂದ ಹತನಾಗುತ್ತಾನೆ. ಆನಂತರ ಕಾರ್ತವೀರ್ಯಾರ್ಜುನನ ಮಕ್ಕಳಿಂದ ಜಮದಗ್ನಿಯ ಹತ್ಯೆ ನಡೆಯುತ್ತದೆ. ಜಮದಗ್ನಿಯ ಪತ್ನಿ ರೇಣುಕಾದೇವಿಯು ಪತಿಯ ದೇಹದೊಡನೆ ಚಿತೆಯೇರುತ್ತಾಳೆ. ಇದರಿಂದ ಕುಪಿತನಾದ ಪರಶುರಾಮನು ಎಲ್ಲಾ ಕ್ಷತ್ರಿಯರನ್ನು ನಾಶ ಮಾಡುವುದಾಗಿ ಪಣ ತೊಟ್ಟು ಕಾರ್ತವೀರ್ಯಾರ್ಜುನನ ಎಲ್ಲಾ ಮಕ್ಕಳನ್ನು ಯುದ್ಧದಲ್ಲಿ ಕೊಲ್ಲುವನು. ಆ ಯುದ್ಧಗಳಿಂದ ಉಂಟಾದ ಕೋಲಾಹಲ ಸುತ್ತಮುತ್ತಲಿನ ಬೆಟ್ಟಗಳಿಂದ ಮಾರ್ದನಿಗೊಂಡು ಆ ಪ್ರದೇಶಕ್ಕೆ ಕೋಲಾಹಲವೆಂಬ ಹೆಸರು ಬಂದಿತೆಂದು ಹಾಗೂ ರೇಣುಕೆಯ ನೆನಪಿಗಾಗಿ ಇಲ್ಲಿನ ಕೋಲಾರಮ್ಮನ ದೇವಾಲಯವನ್ನು ಕಟ್ಟಲಾಯಿತೆಂದು ಐತಿಹ್ಯವಿದೆ.

ಈಗ ಕೋಲಾರ ಪಟ್ಟಣ ಇರುವ ಜಾಗದಲ್ಲಿ ಕೋಲ ಎಂಬ ಗೊಲ್ಲ ನೇಗಿಲಿನಿಂದ ಭೂಮಿಯನ್ನು ಉಳುತ್ತಿದ್ದಾಗ ಬಚ್ಚಿಟ್ಟ ಹಣ ದೊರೆತ ವಿಷಯ ತಿಳಿದ ಉತ್ತಮಚೋಳ ಎಂಬ ಚೋಳರ ದೊರೆ ಆ ಗೊಲ್ಲನನ್ನು ಕಂಚಿಗೆ ಬರುವಂತೆ ಹೇಳಿಕಳುಹಿಸಿದನು. ಆಗ ರೇಣುಕಾದೇವಿ ಕೋಲಾಹಲಮ್ಮನ ರೂಪದಲ್ಲಿ ಕಾಣಿಸಿಕೊಂಡು ಚೋಳರಾಜನಿಗೆ ಎಚ್ಚರಿಕೆ ಕೊಟ್ಟಿದ್ದರಿಂದ, ಕೋಲಾರಮ್ಮನ ಹೆಸರಿನಲ್ಲಿ ದೇವಾಲಯವನ್ನೂ, ಊರನ್ನೂ ಕಟ್ಟಿಸಿದನೆಂದೂ ಇನ್ನೊಂದು ಕಥೆಯಿದೆ. ಕೋಲಗೊಲ್ಲನ ನೇಗಿಲು(ಹಲ) ಎಂಬುದರಿಂದ ಕೋಲಾಹಲ, ನಂತರದಲ್ಲಿ 'ಕೋಲಾರ' ಎಂಬ ಹೆಸರು ಬಂದಿರಬೇಕು.

ಐತಿಹಾಸಿಕವಾಗಿ ಕ್ರಿಸ್ತಶಕ ನಾಲ್ಕನೆಯ ಶತಮಾನದಿಂದಲೂ ಕೋಲಾರವು ಅಸ್ತಿತ್ವದಲ್ಲಿದ್ದಿರಬೇಕು ಎಂಬ ಅಭಿಪ್ರಾಯವಿದೆ. ತಲಕಾಡಿನ ಗಂಗವಂಶದ ಅರಸರು ಮೂಲತಃ ಕೋಲಾರದವರಾಗಿದ್ದು, ತಮ್ಮನ್ನು ಕುವಲಾಲಪುರವರೇಶ್ವರರೆಂದು ಕರೆದುಕೊಂಡಿದ್ದಾರೆ. ತಲಕಾಡಿಗೆ ಮುನ್ನ ಕೋಲಾರ ಅವರ ರಾಜಧಾನಿಯಾಗಿತ್ತು. ಇಲ್ಲಿ ಚೋಳ, ಹೊಯ್ಸಳ, ವಿಜಯನಗರ ಮತ್ತು ಪಾಳೆಯಗಾರರ

ಕಾಲದ ಶಾಸನಗಳು ದೊರಕಿವೆ. ಆಗಿನ ಕಾಲದಲ್ಲಿ ಇದೊಂದು ಪ್ರಮುಖ ಪಟ್ಟಣವಾಗಿ ಮೆರೆದಿತ್ತು. ವಿಶಾಖಪಟ್ಟಣದ ಕಳಿಂಗ ಗಂಗರ ಶಾಸನದಂತೆ, ಗಂಗ ವಂಶದ ೧೭ನೆಯ ದೊರೆ ಕೋಲಾಹಲನು ತನ್ನ ಹೆಸರಿನಲ್ಲಿ ಒಂದು ಪಟ್ಟಣವನ್ನು ನಿರ್ಮಿಸಿ ಅದನ್ನು ಕೋಲಾಹಲವೆಂದು ಹೆಸರಿಸಿದನು. ಚೋಳರ ಆಳ್ವಿಕೆಯಲ್ಲಿ 'ಕೋಲಾಹಲ' ವನ್ನು 'ನಿಕರಿಲಿ ಚೋಳಮಂಡಲಮ್' ಎಂದು ಕರೆಯಲಾಯಿತು. ಕ್ರಿಶ. ೧೧೧೭ ರಲ್ಲಿ, ಹೊಯ್ಸಳರ ಆಳ್ವಿಕೆ ಪ್ರಾರಂಭಗೊಂಡಿತು. ಅವರು 'ಕೋಲಾಹಲ'ವನ್ನು 'ಕೋಳಾಲ' ಎಂದು ಕರೆದಿರುವುದು ಕಂಡುಬರುತ್ತದೆ.

**ಸ್ಥಳ ನಿರ್ದೇಶನ ಮತ್ತು ಮೇರೆಗಳು :** ಕರ್ನಾಟಕ ರಾಜ್ಯದ ದಕ್ಷಿಣ ಬಯಲುನಾಡಿನ ಪೂರ್ವದಲ್ಲಿರುವ ಕೋಲಾರ ಜಿಲ್ಲೆಯು ಭೌಗೋಳಿಕವಾಗಿ ೧೨ ಡಿಗ್ರಿ ೪೬ ನಿಮಿಷ ಮತ್ತು ೧೩ ಡಿಗ್ರಿ ೫೮ ನಿಮಿಷ ಉತ್ತರ ಅಕ್ಷಾಂಶ ಹಾಗೂ ೭೭ ಡಿಗ್ರಿ ೨೧ ನಿಮಿಷ ಮತ್ತು ೭೮ ಡಿಗ್ರಿ ೩೫ ನಿಮಿಷ ಪೂರ್ವ ರೇಖಾಂಶಗಳ ನಡುವೆ ಇರುವ ಪ್ರದೇಶವಾಗಿದೆ.[೧] ಜಿಲ್ಲೆಯು ಉತ್ತರ ದಕ್ಷಿಣವಾಗಿ ೧೩೫ ಕಿ.ಮೀ/೮೫ ಮೈ ಹಾಗೂ ಪೂರ್ವ ಪಶ್ಚಿಮವಾಗಿ ಹೆಚ್ಚು ಕಡಿಮೆ ಅದೇ ಅಳತೆಯನ್ನು ಹೊಂದಿದೆ. ಈ ಜಿಲ್ಲೆಯು ಪಶ್ಚಿಮದಲ್ಲಿ ಬೆಂಗಳೂರು ಗ್ರಾಮಾಂತರ ಹಾಗೂ ತುಮಕೂರು ಜಿಲ್ಲೆಗಳು, ಉತ್ತರ ಮತ್ತು ಪೂರ್ವದಲ್ಲಿ ಆಂಧ್ರಪ್ರದೇಶ (ಅನಂತಪುರ ಮತ್ತು ಚಿತ್ತೂರು ಜಿಲ್ಲೆಗಳು) ಮತ್ತು ದಕ್ಷಿಣದಲ್ಲಿ ತಮಿಳುನಾಡು (ಉತ್ತರ ಆರ್ಕಾಟ್ ಮತ್ತು ಧರ್ಮಪುರಿ ಜಿಲ್ಲೆಗಳು) ರಾಜ್ಯಗಳಿಂದ ಸುತ್ತುವರೆಯಲ್ಪಟ್ಟಿದೆ.

**ವಿಸ್ತೀರ್ಣ ಮತ್ತು ಜನಸಂಖ್ಯೆ :** ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ೮,೨೨೩ ಚ.ಕಿ.ಮೀಗಳಾಗಿದ್ದು, ಇದು ರಾಜ್ಯದ ವಿಸ್ತೀರ್ಣದ ಶೇ.೪.೨೯ ರಷ್ಟಾಗಿದೆ. ರಾಜ್ಯದ ೨೭ ಜಿಲ್ಲೆಗಳ ಪೈಕಿ ವಿಸ್ತೀರ್ಣದಲ್ಲಿ ಜಿಲ್ಲೆಯು ಒಂಬತ್ತನೇ ಸ್ಥಾನವನ್ನು ಪಡೆದಿದೆ. ವಿಸ್ತೀರ್ಣದಲ್ಲಿ ಬಾಗೇಪಲ್ಲಿ ತಾಲೂಕು ೯೩೨.೭೧ ಚ.ಕಿ.ಮೀ. ಪ್ರದೇಶವನ್ನೊಳಗೊಂಡಿದ್ದು ಪ್ರಥಮ ಸ್ಥಾನದಲ್ಲಿದ್ದರೆ ಗುಡಿಬಂಡೆ ತಾಲೂಕು (೨೨೭.೧೪ ಚ.ಕಿ.ಮೀ.) ಕೊನೆಯ ಸ್ಥಾನದಲ್ಲಿದೆ. ೨೦೦೧ರ ಜನಗಣತಿಯ ಅಂಕಿಅಂಶಗಳಂತೆ ಜಿಲ್ಲೆಯಲ್ಲಿ ಒಟ್ಟು ೨೫,೩೬,೦೬೯ ಜನರಿದ್ದು ಅವರಲ್ಲಿ ೧೯,೧೦,೫೪೬ ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ೧೨,೮೬,೧೯೩ ಪುರುಷರು ಹಾಗೂ ೧೨,೪೯,೮೭೬ ಮಹಿಳೆಯರು ಇದ್ದಾರೆ. ಬಂಗಾರಪೇಟೆ ತಾಲೂಕು ೪,೨೧,೪೩೭ ಜನಸಂಖ್ಯೆ ಹೊಂದಿ ಪ್ರಥಮ ಸ್ಥಾನದಲ್ಲಿದ್ದರೆ ಗುಡಿಬಂಡೆ ತಾಲೂಕು ೫೧,೮೨೮ ಜನಸಂಖ್ಯೆ ಹೊಂದಿ ಕೊನೆಯ ಸ್ಥಾನದಲ್ಲಿದೆ. ಜಿಲ್ಲೆಯ ಜನಸಾಂದ್ರತೆಯು ಪ್ರತಿ ಚ.ಕಿ.ಮೀ ೩೦೭ ಇದ್ದು ರಾಜ್ಯದ ಜನಸಾಂದ್ರತೆಗಿಂತ (೨೭೫) ಕಡಿಮೆ ಇದೆ. ಬಂಗಾರಪೇಟೆ ತಾಲೂಕಿನಲ್ಲಿ ಪ್ರತಿ ಚ.ಕಿ.ಮೀ ಜನಸಾಂದ್ರತೆ ೪೪೮ ಆಗಿದ್ದರೆ ಬಾಗೇಪಲ್ಲಿ ತಾಲೂಕಿನಲ್ಲಿ ಇದು ೧೫೬ ಆಗಿದ್ದು ಕ್ರಮವಾಗಿ ಜಿಲ್ಲೆಯ ಅತಿ ಹೆಚ್ಚಿನ ಹಾಗೂ ಅತಿ ಕಡಿಮೆ ಜನಸಾಂದ್ರತೆಯುಳ್ಳ ತಾಲೂಕುಗಳಾಗಿರುತ್ತವೆ. ಕೋಷ್ಟಕ ೧.೧(ಅ) ಮತ್ತು ೧.೧(ಬ)ಗಳಲ್ಲಿ ಜಿಲ್ಲೆಯ ಸಾಮಾನ್ಯ ವಿವರಗಳನ್ನು ನೀಡಿದೆ. ೨೦೦೧ರ ಜನಗಣತಿಯ ವಿವರಗಳನ್ನು ಕೋಷ್ಟಕ ೧.೨ರಲ್ಲಿ ನೀಡಲಾಗಿದೆ.

**ಕೋಷ್ಟಕ ೧.೧ (ಅ): ಕೋಲಾರ ಜಿಲ್ಲೆಯ ಸಾಮಾನ್ಯ ವಿವರಗಳು**

| ಕ್ರಸಂ | ತಾಲೂಕು | ವಿಸ್ತೀರ್ಣ ಚ.ಕಿ.ಮೀ | ಪೂರ್ವ ಅಕ್ಷಾಂಶ ಡಿಗ್ರಿ:ನಿಮಿಷಗಳಲ್ಲಿ | ಪೂರ್ವ ಅಕ್ಷಾಂಶ ಡಿಗ್ರಿ:ನಿಮಿಷಗಳಲ್ಲಿ | ಉತ್ತರ ರೇಖಾಂಶ ಡಿಗ್ರಿ:ನಿಮಿಷಗಳಲ್ಲಿ | ಉತ್ತರ ರೇಖಾಂಶ ಡಿಗ್ರಿ:ನಿಮಿಷಗಳಲ್ಲಿ |
|---|---|---|---|---|---|---|
| ೧ | ೨ | ೩ | ೪ | ೫ | ೬ | ೭ |
| ೧. | **ಕೋಲಾರ** | ೭೯೩ | ೭೭:೫೩ | ೭೮:೧೪ | ೧೩:೦೧ | ೧೩:೧೮ |
| ೨. | **ಗುಡಿಬಂಡೆ** | ೨೨೭ | ೭೭:೩೫ | ೭೭:೪೯ | ೧೩:೩೬ | ೧೩:೪೭ |
| ೩. | **ಗೌರಿಬಿದನೂರು** | ೮೯೪ | ೭೭:೨೧ | ೭೭:೪೦ | ೧೩:೨೬ | ೧೩:೪೮ |
| ೪. | **ಚಿಂತಾಮಣಿ** | ೮೯೨ | ೭೮:೫೧ | ೭೮:೧೦ | ೧೩:೧೫ | ೧೩:೨೧ |
| ೫. | **ಚಿಕ್ಕಬಳ್ಳಾಪುರ** | ೬೪೪ | ೭೭:೩೩ | ೭೭:೫೦ | ೧೩:೨೦ | ೧೩:೨೯ |

* ಜನಗಣತಿ ನಿರ್ದೇಶನಾಲಯ, ಬೆಂಗಳೂರು.

| ೧ | ೨ | ೩ | ೪ | ೫ | ೬ | ೭ |
|---|---|---|---|---|---|---|
| ೬ | ಬಂಗಾರಪೇಟೆ | ೮೪೮ | ೭೮.೦೪ | ೭೮.೩೬ | ೧೨.೪೬ | ೧೩.೦೪ |
| ೭ | ಬಾಗೇಪಲ್ಲಿ | ೯೩೩ | ೭೭.೪೦ | ೭೮.೦೫ | ೧೩.೩೮ | ೧೩.೫೮ |
| ೮ | ಮಾಲೂರು | ೬೪೫ | ೭೭.೪೭ | ೭೮.೦೫ | ೧೨.೪೮ | ೧೩.೧೦ |
| ೯. | ಮುಳಬಾಗಿಲು | ೮೨೩ | ೭೮.೧೨ | ೭೮.೩೫ | ೧೩.೦೧ | ೧೩.೨೨ |
| ೧೦. | ಶಿಡ್ಲಘಟ್ಟ | ೬೬೪ | ೭೭.೪೫ | ೭೭.೫೮ | ೧೩.೧೩ | ೧೩.೪೦ |
| ೧೧. | ಶ್ರೀನಿವಾಸಪುರ | ೮೬೦ | ೭೮.೦೩ | ೭೮.೨೨ | ೧೩.೧೨ | ೧೩.೩೮ |
| | **ಜಿಲ್ಲೆಯ ಮೊತ್ತ** | **೮೨೨೩** | **೭೭.೨೧** | **೭೮.೨೫** | **೧೨.೪೬** | **೧೩.೫೮** |

ಸೂಚನೆ: ೧) ತಾಲೂಕುಗಳ ಒಟ್ಟು ಭೌಗೋಳಿಕ ವಿಸ್ತೀರ್ಣವು ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣದೊಡನೆ ತಾಳೆಯಾಗುವುದಿಲ್ಲ. ಏಕೆಂದರೆ ತಾಲೂಕಿನ ಒಟ್ಟು ಪ್ರದೇಶದ ಅಂಕಿ ಅಂಶಗಳು ಭೂಬಳಕೆ ಪ್ರದೇಶವನ್ನು ಮಾತ್ರ ಪ್ರತಿನಿಧಿಸುತ್ತವೆ. ಈ ಅಂಶವನ್ನು ನಿರ್ದೇಶಕರು, ಭೂಮಾಪನ, ಕಂದಾಯ ವ್ಯವಸ್ಥೆ ಹಾಗೂ ಭೂ ದಾಖಲೆ ಇಲಾಖೆಯವರು ಒದಗಿಸಿರುವ ಮಾಹಿತಿಯಿಂದ ದೃಢೀಕರಿಸಿಕೊಳ್ಳಲಾಗಿದೆ.

ಮೂಲ: ಕೋಲಾರ ಜಿಲ್ಲೆಯ ಅಂಕಿಅಂಶಗಳ ನೋಟ ೨೦೦೨–೦೩

### ಕೋಷ್ಟಕ ೧.೧(ಬ): ಕೋಲಾರ ಜಿಲ್ಲೆಯ ಸಾಮಾನ್ಯ ವಿವರಗಳು

| ಕ್ರಮ ಸಂ. | ತಾಲೂಕು | ಗ್ರಾಮಗಳು (೧೯೯೧) | | | ಗ್ರಾಮ ಪಂಚಾಯತಿಗಳು | ೨೦೦೧ ರ ಜನಗಣತಿ | | | | |
|---|---|---|---|---|---|---|---|---|---|---|
| | | ಜನ ವಸತಿ ಇರುವ | ಜನ ವಸತಿ ಇಲ್ಲದ | ಒಟ್ಟು | (೨೦೦೧ –೦೨) | ಹೋಬಳಿ ಗಳು | ಗ್ರಾಮಗಳು ಗಳು | ಪಟ್ಟಣ ಪಂಚಾಯತಿ ಗಳು | ಪುರ ಸಭೆ ಗಳು | ನಗರ ಸಭೆ |
| ೧. | ಕೋಲಾರ | ೩೨೩ | ೩೯ | ೩೬೨ | ೩೬ | ೭ | ೩೬೧ | ೦ | ೦ | ೧ |
| ೨. | ಗುಡಿಬಂಡೆ | ೮೪ | ೨೧ | ೧೦೫ | ೭ | ೨ | ೧೦೫ | ೧ | ೦ | ೦ |
| ೩. | ಗೌರಿಬಿದನೂರು | ೨೧೬ | ೨೦ | ೨೩೬ | ೩೬ | ೬ | ೨೩೯ | ೦ | ೧ | ೦ |
| ೪. | ಚಿಂತಾಮಣಿ | ೩೪೪ | ೬೩ | ೪೦೭ | ೩೪ | ೬ | ೪೦೦ | ೦ | ೦ | ೧ |
| ೫. | ಚಿಕ್ಕಬಳ್ಳಾಪುರ | ೨೧೯ | ೩೪ | ೨೫೩ | ೨೨ | ೩ | ೨೫೧ | ೦ | ೦ | ೧ |
| ೬ | ಬಂಗಾರಪೇಟೆ | ೩೫೭ | ೩೨ | ೩೮೯ | ೩೭ | ೬ | ೩೮೮ | ೦ | ೧ | ೧ |
| ೭ | ಬಾಗೇಪಲ್ಲಿ | ೨೦೯ | ೧೯ | ೨೨೮ | ೨೪ | ೫ | ೨೨೯ | ೧ | ೦ | ೦ |
| ೮ | ಮಾಲೂರು | ೨೯೬ | ೬೮ | ೩೬೪ | ೨೮ | ೪ | ೩೬೩ | ೦ | ೧ | ೦ |
| ೯. | ಮುಳಬಾಗಿಲು | ೩೧೧ | ೩೪ | ೩೪೫ | ೩೦ | ೫ | ೩೪೩ | ೦ | ೧ | ೦ |
| ೧೦ | ಶಿಡ್ಲಘಟ್ಟ | ೨೪೪ | ೪೫ | ೨೮೯ | ೨೭ | ೪ | ೨೯೦ | ೦ | ೧ | ೦ |
| ೧೧ | ಶ್ರೀನಿವಾಸಪುರ | ೨೯೦ | ೫೭ | ೩೪೭ | ೨೫ | ೫ | ೩೪೮ | ೧ | ೦ | ೦ |
| | **ಜಿಲ್ಲೆಯ ಮೊತ್ತ** | **೨೮೯೩** | **೪೩೨** | **೩೩೨೫** | **೩೦೬** | **೫೩** | **೩೩೧೭** | **೩** | **೫** | **೪** |

**ಕೋಷ್ಟಕ ೧.೨ : ಕೋಲಾರ ಜಿಲ್ಲೆಯ ೨೦೦೧ರ ಜನಗಣತಿಯ ಜನಸಂಖ್ಯಾ ವಿವರಗಳು**

| ವಿವರ | ಒಟ್ಟು | ಪುರುಷರು | ಮಹಿಳೆಯರು |
|---|---|---|---|
| | **ಕೋಲಾರ ಜಿಲ್ಲೆ** | | |
| ಒಟ್ಟು | ೨೫,೩೬,೦೬೯ | ೧೨,೮೬,೧೯೩ | ೧೨,೪೯,೮೭೬ |
| ಗ್ರಾಮೀಣ | ೧೯,೧೦,೫೪೬ | ೯,೬೮,೨೫೩ | ೯,೪೨,೨೯೩ |
| ನಗರ | ೬,೨೫,೫೨೩ | ೩,೧೭,೯೪೦ | ೩,೦೭,೫೮೩ |
| | **ಗೌರಿಬಿದನೂರು ತಾಲೂಕು** | | |
| ಒಟ್ಟು | ೨,೭೧,೧೧೯ | ೧,೩೮,೩೨೮ | ೧,೩೨,೭೯೧ |
| ಗ್ರಾಮೀಣ | ೨,೪೦,೫೮೨ | ೧,೨೨,೭೫೬ | ೧,೧೭,೮೨೬ |
| ನಗರ | ೩೦,೫೩೭ | ೧೫,೫೭೨ | ೧೪,೯೬೫ |
| ಗೌರಿಬಿದನೂರು ಪುರಸಭೆ | ೩೦,೫೩೭ | ೧೫,೫೭೨ | ೧೪,೯೬೫ |
| | **ಚಿಕ್ಕಬಳ್ಳಾಪುರ ತಾಲೂಕು** | | |
| ಒಟ್ಟು | ೧,೯೧,೧೨೨ | ೯೭,೨೩೯ | ೯೩,೮೮೩ |
| ಗ್ರಾಮೀಣ | ೧,೩೬,೧೫೪ | ೬೯,೨೯೬ | ೬೬,೮೫೮ |
| ನಗರ | ೫೪,೯೬೮ | ೨೭,೯೪೩ | ೨೭,೦೨೫ |
| ಚಿಕ್ಕಬಳ್ಳಾಪುರ ನಗರಸಭೆ | ೫೪,೯೬೮ | ೨೭,೯೪೩ | ೨೭,೦೨೫ |
| | **ಗುಡಿಬಂಡೆ ತಾಲೂಕು** | | |
| ಒಟ್ಟು | ೫೧,೮೨೮ | ೧೨,೧೫೦ | ೭,೮೭೩ |
| ಗ್ರಾಮೀಣ | ೪೩,೦೨೧ | ೨೧,೭೫೮ | ೨೧,೨೬೩ |
| ನಗರ | ೮,೮೦೭ | ೪,೪೦೧ | ೪,೪೦೬ |
| **ಗುಡಿಬಂಡೆ ಪಟ್ಟಣ ಪಂಚಾಯಿತಿ** | ೮,೮೦೭ | ೪,೪೦೧ | ೪,೪೦೬ |
| | **ಬಾಗೇಪಲ್ಲಿ ತಾಲೂಕು** | | |
| ಒಟ್ಟು | ೧,೬೯,೬೮೯ | ೮೬,೦೫೩ | ೮೩,೬೩೬ |
| ಗ್ರಾಮೀಣ | ೧,೪೯,೫೭೦ | ೭೫,೬೧೮ | ೭೩,೯೫೨ |
| ನಗರ | ೨೦,೧೧೯ | ೧೦,೪೩೫ | ೯,೬೮೪ |
| **ಬಾಗೇಪಲ್ಲಿ ಪಟ್ಟಣ ಪಂಚಾಯಿತಿ** | ೨೦,೧೧೯ | ೧೦,೪೩೫ | ೯,೬೮೪ |
| | **ಶಿಡ್ಲಘಟ್ಟ ತಾಲೂಕು** | | |
| ಒಟ್ಟು | ೧,೯೩,೯೬೫ | ೯೮,೪೨೬ | ೯೫,೫೩೯ |
| ಗ್ರಾಮೀಣ | ೧,೫೨,೮೬೭ | ೭೭,೨೭೬ | ೭೫,೫೯೧ |
| ನಗರ | ೪೧,೦೯೮ | ೨೧,೧೫೦ | ೧೯,೯೪೮ |
| **ಶಿಡ್ಲಘಟ್ಟ ಪುರಸಭೆ** | ೪೧,೦೯೮ | ೨೧,೧೫೦ | ೧೯,೯೪೮ |

| ವಿವರ | ಒಟ್ಟು | ಪುರುಷರು | ಮಹಿಳೆಯರು |
|---|---|---|---|
| **ಚಿಂತಾಮಣಿ ತಾಲೂಕು** | | | |
| ಒಟ್ಟು | ೨,೭೧,೨೮೪ | ೧,೩೮,೩೧೧ | ೧,೩೨,೯೭೩ |
| ಗ್ರಾಮೀಣ | ೨,೦೫,೭೯೧ | ೧,೦೪,೪೬೬ | ೧,೦೧,೩೨೫ |
| ನಗರ | ೬೫,೪೯೩ | ೩೩,೮೪೫ | ೩೧,೬೪೮ |
| **ಚಿಂತಾಮಣಿ ನಗರಸಭೆ** | ೬೫,೪೯೩ | ೩,೩೮,೪೪೫ | ೩೧,೬೪೮ |
| **ಶ್ರೀನಿವಾಸಪುರ ತಾಲೂಕು** | | | |
| ಒಟ್ಟು | ೧,೮೪,೭೨೧ | ೯೩,೬೩೧ | ೯೧,೦೯೦ |
| ಗ್ರಾಮೀಣ | ೧,೬೧,೭೬೨ | ೮೧,೮೩೩ | ೭೯,೯೨೯ |
| ನಗರ | ೨,೨೯,೫೯ | ೧೧,೭೯೮ | ೧೧,೧೬೧ |
| **ಶ್ರೀನಿವಾಸಪುರ ಪಟ್ಟಣ ಪಂಚಾಯಿತಿ** | ೨೨,೯೫೯ | ೧೧,೭೯೮ | ೧೧,೧೬೧ |
| **ಕೋಲಾರ ತಾಲೂಕು** | | | |
| ಒಟ್ಟು | ೩,೪೨,೫೯೩ | ೧,೭೩,೯೧೩ | ೧,೬೮,೬೮೦ |
| ಗ್ರಾಮೀಣ | ೨,೨೮,೬೮೬ | ೧,೧೫,೮೫೩ | ೧,೧೨,೮೩೩ |
| ನಗರ | ೧,೧೩,೯೦೭ | ೫೮,೦೬೦ | ೫೫,೮೪೭ |
| **ಕೋಲಾರ ನಗರಸಭೆ** | ೧,೧೩,೯೦೭ | ೫೮,೦೬೦ | ೫೫,೮೪೭ |
| **ಮಾಲೂರು ತಾಲೂಕು** | | | |
| ಒಟ್ಟು | ೨೦೭,೦೦೯ | ೧,೦೫,೦೪೭ | ೧,೦೧,೯೬೨ |
| ಗ್ರಾಮೀಣ | ೧,೭೯,೧೯೪ | ೯೦,೮೮೦ | ೮೮,೧೩೪ |
| ನಗರ | ೨೭,೮೧೫ | ೧೪,೧೬೭ | ೧೩,೬೪೮ |
| **ಮಾಲೂರು ಪುರಸಭೆ** | ೨೭,೮೧೫ | ೧೪,೧೬೭ | ೧೩,೬೪೮ |
| **ಬಂಗಾರಪೇಟೆ ತಾಲೂಕು** | | | |
| ಒಟ್ಟು | ೪,೨೧,೪೩೭ | ೨,೧೨,೫೯೨ | ೨,೦೮,೮೪೫ |
| ಗ್ರಾಮೀಣ | ೧,೯೫,೭೮೭ | ೯೮,೨೫೬ | ೯೭,೫೩೧ |
| ನಗರ | ೧,೯೫,೭೮೭ | ೯೮,೨೫೬ | ೯೭,೫೩೧ |
| ರಾಬರ್ಟ್‌ಸನ್ ಪೇಟೆ ನಗರಸಭೆ | ೧,೫೭,೦೮೪ | ೭೮,೫೭೮ | ೭೮,೫೦೬ |
| **ಬಂಗಾರಪೇಟೆ ಪುರಸಭೆ** | ೩೮,೭೦೩ | ೧೯,೬೭೮ | ೧೯,೦೨೫ |
| **ಮುಳಬಾಗಿಲು ತಾಲೂಕು** | | | |
| ಒಟ್ಟು | ೨,೩೧,೩೦೨ | ೧,೧೬,೪೯೪ | ೧,೧೪,೮೦೮ |
| ಗ್ರಾಮೀಣ | ೧,೮೭,೨೬೯ | ೯೪,೧೮೧ | ೯೩,೦೮೮ |
| ನಗರ | ೪೪,೦೩೩ | ೨೨,೩೧೩ | ೨೧,೭೨೦ |
| **ಮುಳಬಾಗಿಲು ಪುರಸಭೆ** | ೪೪,೦೩೩ | ೨,೨೩,೩೧೩ | ೨೧,೭೨೦ |

ಮೂಲ: ಜನಗಣತಿ ನಿರ್ದೇಶನಾಲಯ, ಬೆಂಗಳೂರು

**ಕೋಷ್ಟಕ ೧.೩: ಕೋಲಾರ ಜಿಲ್ಲೆಯ ಹೋಬಳಿವಾರು ಗ್ರಾಮಗಳ ಪಟ್ಟಿ.**

| ತಾಲೂಕು | ಹೋಬಳಿ | ಗ್ರಾಮಗಳು ೨೦೦೧ | ಗ್ರಾಮೀಣ ವಿಸ್ತೀರ್ಣ ಹೆಕ್ಟೇರುಗಳಲ್ಲಿ (೨೦೦೧) |
|---|---|---|---|
| ೧ | ೨ | ೩ | ೪ |
| **ಕೋಲಾರ** | ಕೋಲಾರ | ೬೧ | ೧೧,೧೬೧.೧೫ |
| | ನರಸಾಪುರ | ೨೮ | ೫,೯೭೪.೦೦ |
| | ವಕ್ಕಲೇರಿ | ೫೬ | ೧೧,೭೪೪.೦೪ |
| | ವೇಮಗಲ್ | ೭೧ | ೧೫,೪೮೬.೫೯ |
| | ಸುಗಟೂರು | ೪೪ | ೧೦,೦೮೧.೯೯ |
| | ಹುತ್ತೂರು | ೫೦ | ೧೧,೬೭೫.೬೮ |
| | ಹೊಳೂರು | ೫೧ | ೧೧,೩೫೧.೩೫ |
| | | **೩೬೧** | **೭೭,೪೭೪.೮೦** |
| **ಗುಡಿಬಂಡೆ** | ಗುಡಿಬಂಡೆ | ೪೯ | ೧೧,೬೬೧.೬೭ |
| | ಸೋಮೇನಹಳ್ಳಿ | ೫೬ | ೧೦,೯೮೬.೫೯ |
| | | **೧೦೫** | **೨೨,೬೪೮.೨೬** |
| **ಗೌರಿಬಿದನೂರು** | ಗೌರಿಬಿದನೂರು | ೯೦ | ೧೬,೯೫೩.೮೬ |
| | ತೊಂಡೇಭಾವಿ | ೩೮ | ೧೨,೮೬೦.೦೭ |
| | ದಾರಿನಾಯ್ಕನ ಪಾಳ್ಯ | ೩೬ | ೧೨,೭೭೧.೪೬ |
| | ನಗರಗೆರೆ | ೩೯ | ೧೩,೨೫೦.೧೬ |
| | ಮಂಚೇನಹಳ್ಳಿ | ೪೭ | ೧೫,೧೯೬.೨೩ |
| | ಹೊಸೂರು | ೩೯ | ೧೮,೧೨೭.೬೧ |
| | | **೨೮೯** | **೮೯,೧೫೯.೩೯** |
| **ಚಿಂತಾಮಣಿ** | ಅಂಬಾಜಿದುರ್ಗ | ೭೪ | ೧೪,೯೦೪.೧೮ |
| | ಕೈವಾರ | ೪೯ | ೧೦,೦೬೬.೨೪ |
| | ಚಿಂತಾಮಣಿ | ೭೧ | ೧೪,೦೦೩.೧೭ |
| | ಚಿಲಕಲನೇರ್ಪು | ೬೫ | ೧೮,೬೨೯.೨೧ |
| | ಮುಂಗಾನಹಳ್ಳಿ | ೫೫ | ೧೫,೮೫೧.೯೭ |
| | ಮುರುಗಮಲ್ಲ | ೮೬ | ೧೪,೨೨೯.೦೧ |
| | | **೪೦೦** | **೮೭,೬೮೩.೭೮** |
| **ಚಿಕ್ಕಬಳ್ಳಾಪುರ** | ಚಿಕ್ಕಬಳ್ಳಾಪುರ | ೮೫ | ೧೮,೭೧೫.೯೭ |
| | ನಂದಿ | ೯೪ | ೨೧,೧೩೮.೨೦ |
| | ಮಂಡಿಕಲ್ | ೭೨ | ೨೩,೪೯೫.೪೫ |
| | | **೨೫೧** | **೬೩,೩೪೯.೬೨** |
| **ಬಂಗಾರಪೇಟೆ** | ಕಾಮಸಮುದ್ರ | ೪೮ | ೧೧,೭೬೨.೬೦ |
| | ಕ್ಯಾಸಂಬಳ್ಳಿ | ೭೯ | ೧೭,೨೧೦.೮೦ |
| | ಬಂಗಾರಪೇಟೆ | ೮೨ | ೧೫,೮೩೮.೬೦ |

| ೧ | ೨ | ೩ | ೪ |
|---|---|---|---|
| | ಬೂದಿಕೋಟೆ | ೫೮ | ೧೫,೨೩೩.೯ |
| | ಬೇತಮಂಗಲ | ೬೮ | ೧೨,೦೮೩.೫ |
| | ರಾಬರ್ಟ್‌ಸನ್ ಪೇಟೆ | ೫೩ | ೮,೫೪೬.೩೯ |
| | | **೩೮೫** | **೮೦,೬೭೫೭.೯** |
| **ಬಾಗೇಪಲ್ಲಿ** | ಗೂಳೂರು | ೪೩ | ೨೦,೭೬೭.೯೦ |
| | ಚೇಳೂರು | ೫೦ | ೨೦,೬೪೨.೦೩ |
| | ಪಾತಪಾಳ್ಯ | ೪೯ | ೨೨,೩೬೦.೩೦ |
| | ಬಾಗೇಪಲ್ಲಿ | ೪೮ | ೧೪,೬೫೮.೬ |
| | ಮಿಟ್ಟೇಮರಿ | ೩೯ | ೧೪,೪೯೬.೯೦ |
| | | **೨೨೯** | **೯೨,೯೨೫.೭೩** |
| **ಮಾಲೂರು** | ಟೇಕಲ್ | ೮೪ | ೧೩,೫೦೬.೨೮ |
| | ಮಾಲೂರು | ೧೩೧ | ೨೧,೫೨೬.೦೬ |
| | ಮಾಸ್ತಿ | ೯೦ | ೧೫,೨೯೭.೯೪ |
| | ಲಕ್ಕೂರು | ೫೮ | ೧೩,೨೫೯.೨೦ |
| | | **೩೬೩** | **೬೩,೫೮೯.೪೮** |
| **ಮುಳಬಾಗಿಲು** | ಆವನಿ | ೭೫ | ೧೮,೨೧೮.೪೫ |
| | ತಾಯಲೂರು | ೮೩ | ೧೩,೬೪೦.೩೬ |
| | ದುಗ್ಗಸಂದ್ರ | ೫೯ | ೨೦,೭೪೨.೧೩ |
| | ಬೈರಕೂರು | ೭೧ | ೧೬,೬೪೪.೩೮ |
| | ಮುಳಬಾಗಿಲು | ೫೫ | ೧೧,೨೮೯.೮೪ |
| | | **೩೪೩** | **೮೦,೫೩೫.೧೬** |
| **ಶಿಡ್ಲಘಟ್ಟ** | ಜಂಗಮಕೋಟೆ | ೭೦ | ೧೩,೯೯೫.೧೭ |
| | ಬಶೆಟ್ಟಿಹಳ್ಳಿ | ೭೫ | ೧೫,೯೮೭.೭೬ |
| | ಶಿಡ್ಲಘಟ್ಟ | ೯೬ | ೨೦,೨೯೦.೦೨ |
| | ಸಾದಲಿ | ೪೯ | ೧೫,೮೫೨.೨೬ |
| | | **೨೯೦** | **೬೬,೧೨೫.೨೧** |
| **ಶ್ರೀನಿವಾಸಪುರ** | ನೆಲವಂಕಿ | ೬೯ | ೧೬,೦೩೦.೧೫ |
| | ಯಲ್ದೂರು | ೪೩ | ೧೪,೬೨೦.೮೫ |
| | ರಾಯಲಪಾಡು | ೮೫ | ೨೧,೬೩೩.೧೮ |
| | ರೋಣೂರು | ೭೬ | ೧೬,೬೯೨.೩೦ |
| | ಶ್ರೀನಿವಾಸಪುರ | ೭೪ | ೧೬,೮೭೬.೪೬ |
| | | **೩೪೭** | **೮೫,೮೫೨.೯೪** |

Source: Census of India 2001, Series 30, Karnataka.

**ಆಡಳಿತಾತ್ಮಕ ಬದಲಾವಣೆಗಳು**

ಜಿಲ್ಲೆಯ ಪ್ರಾಚೀನತೆಯನ್ನು ಸಾರುವ ಹಲವಾರು ಐತಿಹ್ಯಗಳಿವೆ. ಮುಳಬಾಗಿಲು ತಾಲೂಕಿನ ಆವನಿ ಪ್ರದೇಶದಲ್ಲಿ ವಾಲ್ಮೀಕಿ ಋಷಿಯು ವಾಸಿಸುತ್ತಿದ್ದನೆಂದು ಪ್ರತೀತಿ ಇದೆ. ಕೋಲಾರಕ್ಕೆ ಪಶ್ಚಿಮದಲ್ಲಿರುವ ಶತಶೃಂಗ ಪರ್ವತ, ರೇಣುಕಾದೇವಿ ಮತ್ತು ಪರಶುರಾಮನಿಗೆ ಸಂಬಂಧಿಸಿದಂತೆ ಪ್ರಸಿದ್ಧಿಯಾಗಿದೆ. ಈ ಎರಡೂ ಸ್ಥಳಗಳಲ್ಲಿಯೂ ಪಾಂಡವರು ತಮ್ಮ ಅರಣ್ಯವಾಸದಲ್ಲಿ ಸುತ್ತಾಡಿದ್ದರೆಂದೂ, ಚಿಂತಾಮಣಿಯ ಹತ್ತಿರವಿರುವ ಕೈವಾರ ಏಕಚಕ್ರಪುರವಾಗಿದ್ದಿತೆಂದೂ ನಂಬಿಕೆಯಿದೆ. ಶಿಡ್ಲಘಟ್ಟದ ಸಾದಲಿ ಎಂಬ ಊರನ್ನು ಸಹದೇವ ನಿರ್ಮಿಸಿದನೆಂದು ಹೇಳಿಕೆಯಿದೆ. ಮುಳಬಾಗಿಲು ತಾಲೂಕಿನ ಕುರುಡುಮಲೆಯಲ್ಲಿ ತ್ರಿಪುರಾಂತಕನ ಮೇಲೆ ಯುದ್ಧಕ್ಕೆ ಹೊರಡುವುದಕ್ಕೆ ಮುನ್ನ ದೇವತೆಗಳೆಲ್ಲರೂ ಒಂದುಗೂಡಿದ್ದರೆಂದು ಪ್ರತೀತಿ ಇದೆ.

ಸುಮಾರು ನಾಲ್ಕನೆಯ ಶತಮಾನದಲ್ಲಿ ಗಂಗರಸರು ಇಲ್ಲಿ ತಮ್ಮ ರಾಜ್ಯವನ್ನು ಕಟ್ಟಿ ರಾಜ್ಯಭಾರ ಮಾಡಲಾರಂಭಿಸಿದರು ಎಂದು ಶಾಸನಗಳಿಂದ ತಿಳಿದುಬರುತ್ತದೆ. ಮಹಾವಲಿ ಬಾಣರಸರು ೭–೮ನೆಯ ಶತಮಾನಗಳಲ್ಲಿ ಪಾಲಾರ್ ನದಿಯ ಪೂರ್ವ ಪ್ರದೇಶದಲ್ಲಿ ರಾಜ್ಯಭಾರ ಮಾಡಿದರು. ಸುಮಾರು ಎಂಟರಿಂದ ೧೦ನೆಯ ಶತಮಾನಗಳಲ್ಲಿ ಜಿಲ್ಲೆಯ ಬಹುಭಾಗ ನೊಳಂಬರ ವಶದಲ್ಲಿತ್ತು. ೧೦ನೆಯ ಶತಮಾನದ ಅಂತ್ಯದಲ್ಲಿ ಜಿಲ್ಲೆಯ ಪ್ರದೇಶ ಚೋಳರ ವಶವಾಯಿತು. ೧೨ನೆಯ ಶತಮಾನದ ಹೊತ್ತಿಗೆ ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತು. ಆದರೂ ಮಧ್ಯೆ ಮಧ್ಯೆ ಸ್ವಲ್ಪ ಕಾಲ ಚೋಳರು, ಗಂಗರು, ಮೊದಲಾದ ವಂಶಗಳವರು ಕೆಲವು ಪ್ರದೇಶಗಳಲ್ಲಿ ಸ್ವತಂತ್ರವಾಗಿಯೂ ಆಳುತ್ತಿದ್ದರು. ಆನಂತರದಲ್ಲಿ ಈ ಪ್ರದೇಶ ವಿಜಯನಗರದ ಅರಸರ ಅಧೀನಕ್ಕೆ ಸೇರಿತ್ತು. ವಿಜಯನಗರದ ಅರಸರು ತಮ್ಮ ಆಡಳಿತದ ಅವಧಿಯಲ್ಲಿ ಆವತಿ ನಾಡ ಪ್ರಭುಗಳು, ಸುಗಟೂರಿನ ಪಾಳೆಯಗಾರರು, ಗುಮ್ಮನಾಯಕನ ಪಾಳ್ಯದ ನಾಯಕರು ಮುಂತಾದ ಹಲವು ಸ್ಥಳೀಯ ಪಾಳೆಯಗಾರರಿಗೆ ಮಾನ್ಯತೆ ನೀಡಿದ್ದರು ಎಂದು ತಿಳಿದುಬರುತ್ತದೆ.

ಬಿಜಾಪುರದ ಆದಿಲ್‌ಷಾಹಿಗಳು ಮೈಸೂರು ಪ್ರಾಂತ್ಯದ ಮೇಲೆ ದಂಡೆತ್ತಿ ಬಂದಾಗ, ಷಾಜಿ ಭೋನ್ಸ್ಲೆಯು ಸುಗಟೂರು ಗೌಡಪ್ರಭುಗಳಿಂದ ಕೋಲಾರವನ್ನು ವಶಪಡಿಸಿಕೊಂಡು, ಪುಂಗನೂರನ್ನು ಅವರಿಗೆ ಬಿಟ್ಟುಕೊಟ್ಟನು. ಈ ಪ್ರಾಂತ್ಯವನ್ನು ಷಾಜಿ ಹಾಗೂ ಆತನ ಮಗ ಸಾಂಬಾಜಿ ಕ್ರಿ.ಶ. ೧೬೫೩ರಿಂದ ೧೬೮೦ರವರೆಗೆ ಆಳಿದರು. ಮುಂದೆ ಮೊಗಲರು ಕೋಲಾರವನ್ನು ವಶಪಡಿಸಿಕೊಂಡು ಶಿರಾ ಸುಬೇದಾರನ ಆಳ್ವಿಕೆಗೆ ಸೇರ್ಪಡಿಸಿದರು. ಆನಂತರ ಮರಾಠರು, ಕಡಪಾ ನವಾಬರು ಮತ್ತು ಆದೋನಿಯ ಅರಸರ ಆಳ್ವಿಕೆಗೆ ಒಳಪಟ್ಟಿತು. ೧೭೬೧ರಲ್ಲಿ ಹೈದರ್‌ಆಲಿಯು ಕೋಲಾರ ಮತ್ತು ಹೊಸಕೋಟೆಯನ್ನು ವಶಪಡಿಸಿಕೊಂಡನು. ೧೭೬೮ರಲ್ಲಿ ಬ್ರಿಟಿಷರು ಮುಳಬಾಗಿಲು ಮತ್ತು ಕೋಲಾರಗಳನ್ನು ತಮ್ಮ ವಶಕ್ಕೆ ತೆಗದುಕೊಂಡರು. ೧೭೭೦ರಲ್ಲಿ ಮರಾಠರು ಜಿಲ್ಲೆಯ ಆಡಳಿತವನ್ನು ತಮ್ಮ ಹತೋಟಿಗೆ ತಂದುಕೊಂಡರು. ಹೈದರ್ ಆಲಿಯು ಪುನಃ ಆಡಳಿತವನ್ನು ತನ್ನ ವಶಕ್ಕೆ ತೆಗೆದುಕೊಂಡನು. ೧೭೯೧ರಲ್ಲಿ ಬ್ರಿಟಿಷರು ಕೋಲಾರವನ್ನು ವಶಪಡಿಸಿಕೊಂಡರೂ ಪುನಃ ೧೭೯೨ರಲ್ಲಿ ಅವರಿಗೆ ವಾಪಸ್ಸು ನೀಡಿದರು. ಟಿಪ್ಪುವಿನ ಪತನದ ನಂತರ ಇದು ಬ್ರಿಟಿಷರ ಮತ್ತು ಮೈಸೂರಿನ ಒಡೆಯರ ಆಡಳಿತಕ್ಕೆ ಒಳಪಟ್ಟಿತು.

ದಿವಾನ್ ಪೂರ್ಣಯ್ಯನವರ ಆಡಳಿತಾವಧಿಯಲ್ಲಿ ೧೮೦೦ರಲ್ಲಿ ಮೈಸೂರು ರಾಜ್ಯವನ್ನು ಮೂರು ಮುಖ್ಯ ಫೌಜ್‌ದಾರಿಗಳನ್ನಾಗಿ (ವಿಭಾಗಗಳನ್ನಾಗಿ) ಈ ಮುಂದಿನಂತೆ, ಪಟ್ಟಣ–ಅಷ್ಟಗ್ರಾಮ, ಚಿತ್ರದುರ್ಗ ಮತ್ತು ಬಿದನೂರು ಅಥವಾ ನಗರಗಳಾಗಿ ವಿಂಗಡಿಸಿ, ಪ್ರತೀ ವಿಭಾಗಕ್ಕೂ ಸುಬೆದಾರರನ್ನು ನೇಮಿಸಲಾಗಿತ್ತು. ಪ್ರತೀ ವಿಭಾಗದಲ್ಲೂ ೧೧೫ ರಿಂದ ೧೨೦ ತಾಲೂಕುಗಳಿದ್ದವು. ತಾಲೂಕು ಮುಖ್ಯಸ್ಥನನ್ನು ಅಮಲ್ದಾರ್‌ನೆಂದು ಕರೆಯುತ್ತಿದ್ದರು. ಪ್ರತೀ ತಾಲೂಕನ್ನು ಹೋಬಳಿಗಳನ್ನಾಗಿ ಪುನರ್ ವಿಭಜಿಸಲಾಗಿದ್ದಿತು. ಹೋಬಳಿಯು ಅನೇಕ ಗ್ರಾಮಗಳನ್ನು ಒಳಗೊಂಡಿತ್ತು. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ರಾಜ್ಯವನ್ನು ಆರು ಫೌಜ್‌ಧಾರಿಗಳನ್ನಾಗಿ ವಿಭಜಿಸಿದ್ದರು. ಅವುಗಳೆಂದರೆ, ಮೈಸೂರು–ಅಷ್ಟಗ್ರಾಮ, ಬೆಂಗಳೂರು, ಚಿತ್ರದುರ್ಗ, ನಗರ, ಮಧುಗಿರಿ ಮತ್ತು ಮಂಜರಾಬಾದ್. ಈಗಿನ ಕೋಲಾರ ಜಿಲ್ಲೆಯು ಬೆಂಗಳೂರು ಫೌಜುದಾರಿಗೆ ಒಳಪಟ್ಟಿತ್ತು. ನಂತರ ೧೮೩೪ರಲ್ಲಿ ಇದನ್ನು ಬೆಂಗಳೂರು ವಿಭಾಗಕ್ಕೆ ಸೇರಿಸಲಾಯಿತು.

ಕಮೀಷನರ್‌ಗಳ ಆಡಳಿತದಲ್ಲಿ ಅಂದರೆ, ೧೮೬೨–೬೩ರಲ್ಲಿ ಆದ ಆಡಳಿತ ವಿಭಾಗಗಳ ಬದಲಾವಣೆಗಳಲ್ಲಿ, ಆರು ವಿಭಾಗಗಳನ್ನು ಪುನರ್ ವಿಂಗಡಿಸಿ ಮೂರು ಕಂದಾಯ ವಿಭಾಗಗಳನ್ನಾಗಿ ಮಾಡಿ, ರಾಜ್ಯವನ್ನು ಎಂಟು ಜಿಲ್ಲೆಗಳನ್ನಾಗಿ ವಿಂಗಡಿಸಿದರು. ಕೋಲಾರ ಜಿಲ್ಲೆಯನ್ನು ಬೆಂಗಳೂರು ವಿಭಾಗದಿಂದ ಬೇರ್ಪಡಿಸಿ, ನಂದಿದುರ್ಗ ವಿಭಾಗಕ್ಕೆ ಸೇರ್ಪಡೆಗೊಳಿಸಲಾಯಿತು. ಜಿಲ್ಲೆಯ ಮುಖ್ಯಸ್ಥರನ್ನು ಡೆಪ್ಯುಟಿ ಸೂಪರಿಂಟೆಂಡೆಂಟ್ ಎಂದು, ವಿಭಾಗದ ಮುಖ್ಯಸ್ಥರನ್ನು ಸೂಪರಿಂಟೆಂಡೆಂಟ್ ಎಂದು ಕರೆಯಲಾಯಿತು. ೧೮೬೯ರಲ್ಲಿ ಆಡಳಿತದ ಮುಖ್ಯಸ್ಥರನ್ನು ಮುಖ್ಯ ಆಯುಕ್ತರು(ಚೀಫ್ ಕಮಿಷನರ್) ಎಂದು ಕರೆಯಲಾಯಿತು. ೧೮೭೩ ರಲ್ಲಿ ಸೂಪರಿಂಟೆಂಡೆಂಟ್‌ರವರನ್ನು ಆಯುಕ್ತರು(ಕಮಿಷನರ್) ಎಂದು ಹೆಸರಿಸಲಾಯಿತು. ೧೮೭೯ ರಲ್ಲಿ ವಿಭಾಗಗಳನ್ನು ಮತ್ತು ಆಯುಕ್ತರ ಹುದ್ದೆಗಳನ್ನು ರದ್ದುಪಡಿಸಲಾಯಿತು. ಜಿಲ್ಲೆಯ ಮುಖ್ಯಸ್ಥರಾಗಿ ಜಿಲ್ಲಾಧಿಕಾರಿಗಳು, ಕಂದಾಯ ಉಪ ವಿಭಾಗಗಳ ಮುಖ್ಯಸ್ಥರಾಗಿ ಉಪವಿಭಾಗಾಧಿಕಾರಿಗಳು ಮತ್ತು ತಾಲೂಕುಗಳ ಮುಖ್ಯಸ್ಥರಾಗಿ ಅಮಲ್ದಾರರನ್ನು ನೇಮಿಸಲಾಯಿತು. ೧೮೮೨ ರಲ್ಲಿ ಗುಡಿಬಂಡೆ, ಶ್ರೀನಿವಾಸಪುರ ಮತ್ತು ಮಾಲೂರು ತಾಲೂಕುಗಳನ್ನು ರದ್ದುಪಡಿಸಲಾಯಿತು. ಆದರೆ ೧೮೮೬ ರಲ್ಲಿ ಶ್ರೀನಿವಾಸಪುರ ಮತ್ತು ಮಾಲೂರು ತಾಲೂಕುಗಳನ್ನು ಪುನಃ ರಚಿಸಲಾಯಿತು.

೧೯೦೩ ರಲ್ಲಿ ಜಿಲ್ಲೆಯಲ್ಲಿ ಮೂರು ಕಂದಾಯ ಉಪವಿಭಾಗಗಳಿದ್ದವು. ೧) ಕೋಲಾರ, ಚಿಂತಾಮಣಿ ಮತ್ತು ಶ್ರೀನಿವಾಸಪುರ ತಾಲೂಕುಗಳನ್ನೊಳಗೊಂಡ ಕೋಲಾರ ಉಪವಿಭಾಗ, ೨) ಚಿಕ್ಕಬಳ್ಳಾಪುರ, ಗೌರಿಬಿದನೂರು, ಬಾಗೇಪಲ್ಲಿ (೧೮೮೨ ರವರೆಗೂ ಗುಮ್ಮನಾಯಕನಪಾಳ್ಯ) ಮತ್ತು ಶಿಡ್ಲಘಟ್ಟ ತಾಲೂಕುಗಳನ್ನೊಳಗೊಂಡ ಚಿಕ್ಕಬಳ್ಳಾಪುರ ಉಪವಿಭಾಗ ಮತ್ತು ೩) ಬೌರಿಂಗ್‌ಪೇಟೆ (ಬಂಗಾರಪೇಟೆ), ಮಾಲೂರು ಮತ್ತು ಮುಳಬಾಗಿಲು ತಾಲೂಕುಗಳನ್ನೊಳಗೊಂಡ ಕೋಲಾರ ಎರಡನೇ ಉಪವಿಭಾಗ. ೧೮೮೨ ರಲ್ಲಿ ಗುಡಿಬಂಡೆ ತಾಲೂಕನ್ನು ರದ್ದುಪಡಿಸಿದಾಗ, ೧೩೮ ಗ್ರಾಮಗಳನ್ನು ಬಾಗೇಪಲ್ಲಿ ತಾಲೂಕಿಗೂ, ೪೬ ಗ್ರಾಮಗಳನ್ನು ಚಿಕ್ಕಬಳ್ಳಾಪುರ ತಾಲೂಕಿಗೂ ಮತ್ತು ಒಂದು ಗ್ರಾಮವನ್ನು ಶಿಡ್ಲಘಟ್ಟ ತಾಲೂಕಿಗೂ ವರ್ಗಾಯಿಸಲಾಯಿತು. ನಂತರದಲ್ಲಿ ಬಾಗೇಪಲ್ಲಿ ತಾಲೂಕಿಗೆ ಸೇರಿಸಿದ್ದ ೧೩೮ ಗ್ರಾಮಗಳನ್ನು ಪ್ರತ್ಯೇಕಿಸಿ, ಗುಡಿಬಂಡೆ ಉಪ ತಾಲೂಕನ್ನು ರಚಿಸಲಾಯಿತು.

೧೯೧೮ ರಲ್ಲಿ ಉಪವಿಭಾಗಗಳನ್ನು ಪುನರ್‌ರಚಿಸಲಾಯಿತು. ಕೋಲಾರ ಎರಡನೇ ಉಪವಿಭಾಗವನ್ನು ರದ್ದುಪಡಿಸಿ ಚಿಂತಾಮಣಿ, ಶ್ರೀನಿವಾಸಪುರ ಮತ್ತು ಶಿಡ್ಲಘಟ್ಟ ತಾಲೂಕುಗಳನ್ನೊಳಗೊಂಡ ಚಿಂತಾಮಣಿ ಉಪವಿಭಾಗವನ್ನು ರಚಿಸಲಾಯಿತು. ಪುನಃ ೧೯೨೨ ರಲ್ಲಿ ಚಿಂತಾಮಣಿ ಉಪವಿಭಾಗವನ್ನು ರದ್ದುಪಡಿಸಿ, ಉಪವಿಭಾಗಗಳ ಸಂಖ್ಯೆಯನ್ನು ಎರಡಕ್ಕೆ ಇಳಿಸಲಾಯಿತು. ಚಿಂತಾಮಣಿ, ಶ್ರೀನಿವಾಸಪುರ, ಮುಳಬಾಗಿಲು ಮತ್ತು ಮಾಲೂರು ತಾಲೂಕುಗಳನ್ನೊಳಗೊಂಡ ಮಾಲೂರು ಉಪವಿಭಾಗ (ಕೋಲಾರ ಕೇಂದ್ರಸ್ಥಾನ) ಮತ್ತು ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಗೌರಿಬಿದನೂರು, ಬಾಗೇಪಲ್ಲಿ ಮತ್ತು ಗುಡಿಬಂಡೆ ಉಪತಾಲೂಕನ್ನು ಒಳಗೊಂಡ ಚಿಕ್ಕಬಳ್ಳಾಪುರ ಉಪವಿಭಾಗವನ್ನು (ಚಿಕ್ಕಬಳ್ಳಾಪುರ ಕೇಂದ್ರಸ್ಥಾನ) ರಚಿಸಲಾಯಿತು. ಉಳಿದ ಕೋಲಾರ ಮತ್ತು ಬಂಗಾರಪೇಟೆ ತಾಲೂಕುಗಳು ಜಿಲ್ಲಾಧಿಕಾರಿಗಳ ನೇರ ಆಡಳಿತಕ್ಕೆ ಒಳಪಟ್ಟಿದ್ದವು. ನಂತರದಲ್ಲಿ ಮೇಲಿನ ಎರಡೂ ತಾಲೂಕಗಳನ್ನು ಕೋಲಾರ ಉಪವಿಭಾಗಕ್ಕೆ ಸೇರಿಸಲಾಯಿತು. ಗುಡಿಬಂಡೆ ಉಪ ತಾಲೂಕನ್ನು ಪೂರ್ಣ ಪ್ರಮಾಣದ ತಾಲೂಕಾಗಿ ಮಾರ್ಪಡಿಸಲಾಯಿತು.

೧೯೫೦ರಲ್ಲಿ ಆದ ಬದಲಾವಣೆಗಳಲ್ಲಿ, ಬಂಗಾರಪೇಟೆ ತಾಲೂಕಿನ ವರಡಿಕೊಪ್ಪ, ವಳಗಳಕೊಪ್ಪ, ಬ್ಯಾಪರೆಡ್ಡಿಹಳ್ಳಿ, ಹರಕಚಿನ್ನಪಲ್ಲಿ, ಗೊಲ್ಲಪಲ್ಲಿ, ಹೊಸಪೇಟೆ ಮತ್ತು ಚೆನ್ನಾರಿದೊಡ್ಡಿ ಹಾಗೂ ಮಾಲೂರು ತಾಲೂಕಿನ ಕೊಳದಾಸನಪುರ ಗ್ರಾಮಗಳನ್ನು ಮದ್ರಾಸ್ ರಾಜ್ಯಕ್ಕೆ ವರ್ಗಾಯಿಸಲಾಯಿತು. ಅದೇ ಸಮಯದಲ್ಲಿ ಮದ್ರಾಸ್ ರಾಜ್ಯದ ಸೇಲಂ ಜಿಲ್ಲೆಯ ಹೊಸೂರು ತಾಲೂಕಿನ ಅರಳೇರಿ, ರಾಯಸಂದ್ರಮ್, ಬಾಲನಪಲ್ಲಿ ಮತ್ತು ಎತ್ತಕೋಡಿ ಗ್ರಾಮಗಳನ್ನು ಮಾಲೂರು ತಾಲೂಕಿಗೆ ವರ್ಗಾಯಿಸಲಾಯಿತು. ಆಂಧ್ರಪ್ರದೇಶ ರಾಜ್ಯದ ಅನಂತಪುರ ಜಿಲ್ಲೆಯ ಹಿಂದೂಪುರ ತಾಲೂಕಿನ ಚಿಂತಕುಂತಪಳ್ಳಿ ಗ್ರಾಮವನ್ನು ಗುಡಿಬಂಡೆ ತಾಲೂಕಿಗೆ ಸೇರಿಸಲಾಯಿತು. ೧೯೬೧ ರಲ್ಲಿ ಅಸ್ತಿತ್ವದಲ್ಲಿದ್ದ ಉಪ ವಿಭಾಗಗಳ ಭೂ ವಿಸ್ತೀರ್ಣದ ವಿವರಗಳನ್ನು ಕೋಷ್ಟಕ ೧.೪ ರಲ್ಲಿ ನೀಡಿದೆ.

ಪ್ರಸ್ತುತ, ಕೋಲಾರ ಜಿಲ್ಲೆಯು ಬೆಂಗಳೂರು ವಿಭಾಗಕ್ಕೆ ಸೇರಿದ್ದು, ಚಿಕ್ಕಬಳ್ಳಾಪುರ ಮತ್ತು ಕೋಲಾರ ಉಪ ವಿಭಾಗಗಳನ್ನು ಒಳಗೊಂಡಿದೆ. ಚಿಕ್ಕಬಳ್ಳಾಪುರ ಉಪ ವಿಭಾಗಕ್ಕೆ ಆರು ತಾಲೂಕುಗಳು (ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಗುಡಿಬಂಡೆ ಮತ್ತು ಶಿಡ್ಲಘಟ್ಟ) ಮತ್ತು ಕೋಲಾರ ಉಪ ವಿಭಾಗಕ್ಕೆ ಐದು ತಾಲೂಕುಗಳು (ಕೋಲಾರ, ಮಾಲೂರು, ಮುಳಬಾಗಲು,

**ಕೋಷ್ಟಕ ೧.೪: ೧೯೬೧ ರಲ್ಲಿ ಅಸ್ತಿತ್ವದಲ್ಲಿದ್ದ ಉಪ ವಿಭಾಗಗಳ ಭೂ ವಿಸ್ತೀರ್ಣದ ವಿವರಗಳು**

| ಉಪವಿಭಾಗ ಮತ್ತು ತಾಲೂಕು | ಹೋಬಳಿಗಳ ಸಂಖ್ಯೆ | ವಿಸ್ತೀರ್ಣ ಚದುರ ಮೈಲಿಗಳಲ್ಲಿ | ವಿಸ್ತೀರ್ಣ ಚದುರ ಕಿಲೋಮೀಟರುಗಳಲ್ಲಿ | ಗ್ರಾಮಗಳು |
|---|---|---|---|---|
| | | **ಚಿಕ್ಕಬಳ್ಳಾಪುರ ಉಪವಿಭಾಗ** | | |
| **ಚಿಕ್ಕಬಳ್ಳಾಪುರ** | ೩ | ೨೨೮.೯ | ೫೯೨.೮ | ೨೧೦ |
| **ಶಿಡ್ಲಘಟ್ಟ** | ೪ | ೨೫೯.೯ | ೬೭೩.೧ | ೨೩೧ |
| **ಚಿಂತಾಮಣಿ** | ೬ | ೩೫೧.೧ | ೯೦೯.೪ | ೩೩೪ |
| **ಬಾಗೇಪಲ್ಲಿ** | ೫ | ೩೬೦.೨ | ೯೩೨.೯ | ೨೦೪ |
| **ಗುಡಿಬಂಡೆ** | ೨ | ೧೨೪.೮ | ೩೨೩.೩ | ೮೨ |
| **ಗೌರಿಬಿದನೂರು** | ೬ | ೩೪೦.೪ | ೮೮೧.೭ | ೨೦೪ |
| | | **ಕೋಲಾರ ಉಪವಿಭಾಗ** | | |
| **ಕೋಲಾರ** | ೭ | ೩೦೮.೧ | ೭೯೮.೦ | ೩೧೧ |
| **ಶ್ರೀನಿವಾಸಪುರ** | ೫ | ೩೨೦.೨ | ೮೨೯.೩ | ೨೯೦ |
| **ಮುಳಬಾಗಿಲು** | ೫ | ೩೨೧.೦ | ೮೩೧.೪ | ೩೦೨ |
| **ಬಂಗಾರಪೇಟೆ** | ೬ | ೩೦೫.೬ | ೭೯೧.೫ | ೨೮೪ |
| **ಮಾಲೂರು** | ೪ | ೨೫೯.೯ | ೬೭೩.೧ | ೨೯೧ |
| ಜಿಲ್ಲೆಯ ಒಟ್ಟು | **೫೩** | **೩,೧೮೦.೧** | **೮,೨೩೬.೫** | **೨,೭೪೩** |

ಮೂಲ: ಕೋಲಾರ ಜಿಲ್ಲಾ ಗ್ಯಾಸೆಟಿಯರ್, ೧೯೬೮.

ಬಂಗಾರಪೇಟೆ ಮತ್ತು ಶ್ರೀನಿವಾಸಪುರ) ಸೇರುತ್ತವೆ. ಕೋಲಾರ ನಗರವು ಜಿಲ್ಲಾ ಕೇಂದ್ರವಾಗಿದ್ದು, ಬೆಂಗಳೂರಿನಿಂದ ಪೂರ್ವಕ್ಕೆ ೭೦ ಕಿ.ಮೀ. ದೂರದಲ್ಲಿ ರಾಷ್ಟ್ರೀಯ ಹೆದ್ದಾರಿ ೪ ರಲ್ಲಿ ಇರುತ್ತದೆ. ಚಿಕ್ಕಬಳ್ಳಾಪುರ ಪಟ್ಟಣವು ಜಿಲ್ಲಾ ಕೇಂದ್ರ ಸ್ಥಾನದಿಂದ ಉತ್ತರಕ್ಕೆ ೬೨ ಕಿ.ಮೀ. ದೂರದಲ್ಲಿದೆ.

### ಜಲ ಸಂಪನ್ಮೂಲಗಳು

ಭೌಗೋಳಿಕವಾಗಿ ಜಿಲ್ಲೆಯು, ಪೂರ್ವಘಟ್ಟಗಳ ಅಂಚನ್ನು ಈಶಾನ್ಯದಲ್ಲಿ ಮತ್ತು ದಕ್ಷಿಣದಲ್ಲಿ ಗಡಿಯಾಗಿ ಹೊಂದಿದೆ. ಜಿಲ್ಲೆಯ ಮುಖ್ಯ ಜಲಾನಯನವು ಈಶಾನ್ಯದಲ್ಲಿರುವ ನಂದೀದುರ್ಗದ (ಸಮುದ್ರಮಟ್ಟದಿಂದ ೧,೪೫೫ ಮೀ(೪,೮೫೧ ಅಡಿ)) ಆಸುಪಾಸಿನಲ್ಲಿ ಪ್ರಾರಂಭವಾಗುತ್ತದೆ. ನಂದೀದುರ್ಗದಿಂದ ಏಳು ನದಿಗಳು ಉಗಮವಾಗಿ ವಿವಿಧ ದಿಕ್ಕುಗಳೆಡೆ ಹರಿಯುತ್ತವೆಯೆಂದು ಹೇಳಲಾಗುತ್ತದೆ. ಅರ್ಕಾವತಿ ಮತ್ತು ಉತ್ತರಪಿನಾಕಿನಿ ನದಿಗಳು ನಂದೀದುರ್ಗದ ಪಶ್ಚಿಮದಲ್ಲಿ ಉಗಮಗೊಂಡು, ಒಂದು ದಕ್ಷಿಣದೆಡೆ ಮತ್ತು ಇನ್ನೊಂದು ಉತ್ತರದೆಡೆ ಪ್ರವಹಿಸುತ್ತವೆ. ಚಿತ್ರಾವತಿ ಮತ್ತು ಪಾಪಾಘ್ನಿ ನದಿಗಳು ನಂದೀದುರ್ಗದ ಉತ್ತರದಲ್ಲಿ ಹುಟ್ಟಿ ಈಶಾನ್ಯದ ಕಡೆ ಹರಿಯುತ್ತವೆ. ನಂದೀದುರ್ಗದ ಪೂರ್ವದೆಡೆ ಉಗಮಿಸುವ ಪಾಲಾರ್ ಮತ್ತು ದಕ್ಷಿಣ ಪಿನಾಕಿನಿ ನದಿಗಳು ಪೂರ್ವ ಮತ್ತು ದಕ್ಷಿಣ ದಿಕ್ಕಿನೆಡೆ ಹರಿಯುತ್ತವೆ. ಅರ್ಕಾವತಿ ಮತ್ತು ದಕ್ಷಿಣ ಪಿನಾಕಿನಿ ನದಿಗಳ ಹರಿವು ಬಹುತೇಕ ಬೆಂಗಳೂರು ಗ್ರಾಮೀಣ ಜಿಲ್ಲೆಯಲ್ಲಿದೆ. ಜಿಲ್ಲೆಯಲ್ಲಿ ಮುಖ್ಯವಾಗಿ ಉತ್ತರದಲ್ಲಿ ಉತ್ತರಪಿನಾಕಿನಿ ನದಿ ಮತ್ತು ದಕ್ಷಿಣದಲ್ಲಿ ಪಾಲಾರ್ ನದಿಗಳ ಜಲಾನಯನ ಪ್ರದೇಶವಿದ್ದು, ಚಿಕ್ಕಬಳ್ಳಾಪುರದಿಂದ ಶ್ರೀನಿವಾಸಪುರದವರೆಗೆ ಒಂದು ಕಾಲ್ಪನಿಕ ರೇಖೆಯನ್ನು ಎಳೆದಾಗ ಆ ರೇಖೆಯು ಈ ಎರಡೂ ಜಲಾನಯನಗಳನ್ನು ವಿಭಜಿಸುತ್ತದೆ. ಜಿಲ್ಲೆಯಲ್ಲಿ ಸರ್ವಋತು ನದಿಗಳಿಲ್ಲ. ಜಿಲ್ಲೆಯ ಬಹುತೇಕ ನದಿಗಳು ಸಣ್ಣ ಪ್ರಮಾಣದವುಗಳಾಗಿದ್ದು,

ಮಳೆಗಾಲದಲ್ಲಿ ಮಾತ್ರ ಇವು ಹರಿಯುತ್ತವೆ. ಜಿಲ್ಲೆಯ ಮಳೆ ನೀರು ಪೂರ್ವಾಭಿಮುಖವಾಗಿ ಆಂಧ್ರಪ್ರದೇಶದ ಪಲಮನೇರ್ ವಲಯಕ್ಕೆ ಸೇರಿದ ನಾಯಕನೇರಿ ಕಣಿವೆ ಮತ್ತು ಮೊಗಿಲಿ ಕಣಿವೆಗಳ ಕಡೆಗೆ ಸಾಗುತ್ತದೆ. ಇವೆರಡು ಕಣಿವೆಗಳ ದಟ್ಟ ಕುರುಚಲು ಕಾಡನ್ನು ಕೌಂಡಿನ್ಯ ವನ್ಯಜೀವಿಧಾಮದ ಮೀಸಲು ಅರಣ್ಯವೆಂದು ವರ್ಗೀಕರಿಸಲಾಗಿದೆ.

**ಪಾಲಾರ್**

ಪಾಲಾರ್ ನದಿಯು ನಂದಿದುರ್ಗ ಬೆಟ್ಟದ ಮೇಲಿನ ಒಂದು ಬಾವಿಯಲ್ಲಿ ಚಿಲುಮೆಯ ರೀತಿ ಉಗಮವಾಗಿ ನಂತರ ಗುಪ್ತಗಾಮಿನಿಯಾಗಿ ದಕ್ಷಿಣ ಪಿನಾಕಿನಿಯನ್ನು ದಾಟುತ್ತದೆ ಎಂಬುದು ಸ್ಥಳೀಯರ ನಂಬಿಕೆ. ಈ ನದಿಯು ಅಂಬಾಜಿದುರ್ಗಕ್ಕೆ ಪಶ್ಚಿಮದಲ್ಲಿರುವ ಕೈವಾರದ ನೆರೆಯ ಪ್ರದೇಶದಲ್ಲಿ ಉಗಮ ಹೊಂದಿ ಅಂಬಾಜಿದುರ್ಗದ ಪಶ್ಚಿಮಕ್ಕಿರುವ ಗೌತಮಗುಡ್ಡದಲ್ಲಿ ಗೋಚರಿಸುವುದು ಎಂದೂ ಇನ್ನೊಂದು ಹೇಳಿಕೆಯಿದೆ. ಪಾಲಾರ್ ನದಿಯು ಕೈವಾರದ ದಕ್ಷಿಣಕ್ಕಿರುವ ಸಣ್ಣ ಗುಡ್ಡವಾದ ಗೌತಮಗುಡ್ಡದಲ್ಲಿ ಮೊದಲು ಕಾಣಿಸಿಕೊಳ್ಳುತ್ತದೆ. ಜಂಗಮಕೋಟೆ ಹಾಗೂ ಕೋಲಾರದ ಮೂಲಕ ೧೬ ಕಿ.ಮೀ. ದೂರದವರೆಗೆ ಪಶ್ಚಿಮಾಭಿಮುಖವಾಗಿ ಹರಿಯುತ್ತದೆ. ಯೆನಂಡಹಳ್ಳಿಯ ಹತ್ತಿರ ಇದಕ್ಕೆ ಒಂದು ಉಪನದಿ ಸೇರಿಕೊಳ್ಳುತ್ತದೆ. ಅಲ್ಲಿಂದ ಆಗ್ನೇಯ ದಿಕ್ಕಿಗೆ, ಬಂಗಾರಪೇಟೆ ತಾಲೂಕಿನಲ್ಲಿ ಹರಿದು ಬೇತಮಂಗಲ ಮತ್ತು ರಾಮಸಾಗರ ಎಂಬ ಸ್ಥಳಗಳಲ್ಲಿ ದೊಡ್ಡ ಕೆರೆಗಳಾಗಿ, ಅನಂತರ ರಾಜ್ಯದ ಗಡಿಯನ್ನು ದಾಟಿ ಗುಂಡಲಪಲ್ಲಿ ಎಂಬ ಹಳ್ಳಿಯ ಹತ್ತಿರ ಉತ್ತರ ಆರ್ಕಾಟ್ ಜಿಲ್ಲೆಯನ್ನು ಪ್ರವೇಶಿಸುತ್ತದೆ. ನಂತರ ವೆಲ್ಲೂರು, ಆರ್ಕಾಟ್ ಮತ್ತು ಕಾಂಜೀವರಂಗಳ ಮೂಲಕ ಚೆಂಗಲ್‌ಪೇಟೆ ಜಿಲ್ಲೆಯಲ್ಲಿ ಹರಿದು ಚೆನ್ನೈಗೆ ದಕ್ಷಿಣದಲ್ಲಿ ಬಂಗಾಳಕೊಲ್ಲಿಯನ್ನು ಸೇರುತ್ತದೆ. ಪಾಲಾರ್ ಎಂದರೆ (ಹಳೆಗನ್ನಡದಲ್ಲಿ 'ಪಾಲ್' ಎಂದರೆ ಹಾಲು) ಹಾಲಿನ ನದಿ ಎಂದು ಅರ್ಥವಿದ್ದು, ಪುರಾಣಗಳಲ್ಲಿ ಇದನ್ನು ಕ್ಷೀರನದಿ ಎಂದು ಕರೆಯಲಾಗಿದೆ. ಉಗಮ ಸ್ಥಾನದಿಂದ ಜಿಲ್ಲೆಯನ್ನು ಬಿಡುವವರೆಗೆ ಈ ನದಿಯು ೧೦೮ ಕಿ.ಮೀ. ದೂರ ಪ್ರವಹಿಸುತ್ತದೆ. ಜಿಲ್ಲೆಯಲ್ಲಿ ಈ ನದಿಯ ಜಲಾನಯನ ಪ್ರದೇಶದ ವಿಸ್ತೀರ್ಣ ೨,೭೧೨ ಚಕಿಮೀ. (೧,೦೪೭ ಚಮೈ) ಆಗಿರುತ್ತದೆ. ಈ ನದಿಯ ಜಲಾನಯನ ಪ್ರದೇಶದಲ್ಲಿ ೧,೬೧೫ ಕ್ಕೂ ಹೆಚ್ಚು ಕೆರೆಗಳು ದಾಖಲಾಗಿವೆ. ಮುದುವಾಡಿ, ಹೊಳಲಿ, ಚಲ್ಲಪಲ್ಲಿ, ರಾಮಸಾಗರ, ಬೇತಮಂಗಲ ಮುಂತಾದ ಗ್ರಾಮಗಳು ಈ ನದಿಯ ದಂಡೆಯಲ್ಲಿವೆ.

**ಉತ್ತರ ಪಿನಾಕಿನಿ**

ಉತ್ತರ ಪೆನ್ನಾರ್ ಎಂದೂ ಕರೆಯಲ್ಪಡುವ ಉತ್ತರ ಪಿನಾಕಿನಿ ನದಿಯು, ಚಿಕ್ಕಬಳ್ಳಾಪುರ ತಾಲೂಕಿನ ನಂದಿಬೆಟ್ಟದ ವಾಯವ್ಯದಲ್ಲಿರುವ ಚನ್ನಕೇಶವ ಬೆಟ್ಟದಲ್ಲಿ ಉಗಮಿಸಿ, ಮಂಚೇನಹಳ್ಳಿ ಮತ್ತು ಗೌರಿಬಿದನೂರು ಮೂಲಕ ಆಂಧ್ರಪ್ರದೇಶವನ್ನು ಪ್ರವೇಶಿಸಿ ಹಿಂದೂಪುರ ತಾಲೂಕು, ಕಡಪ ಮತ್ತು ನೆಲ್ಲೂರು ಜಿಲ್ಲೆಗಳ ಮೂಲಕ ಹರಿದು, ನೆಲ್ಲೂರಿನ ಬಳಿ ಬಂಗಾಳಕೊಲ್ಲಿಯನ್ನು ಸೇರುತ್ತದೆ. ಉತ್ತರ ಪಿನಾಕಿನಿಯು ಆಂಧ್ರಪ್ರದೇಶಕ್ಕೆ ಸೇರುವ ಮುನ್ನ ತುಮಕೂರು ಜಿಲ್ಲೆಯ ಕೊರಟಗೆರೆ, ಮಧುಗಿರಿ ಮತ್ತು ಪಾವಗಡ ತಾಲೂಕಿನ ಪೂರ್ವದಲ್ಲಿ ಸ್ವಲ್ಪ ದೂರ ಹರಿಯುತ್ತದೆ. ಕುಮುದವತಿ, ಚಿತ್ರಾವತಿ ಮತ್ತು ಕುಶಾವತಿ ಇದರ ಉಪನದಿಗಳು. ಜಿಲ್ಲೆಯಲ್ಲಿ ಈ ನದಿಯು ೫೪ ಕಿ.ಮೀ. (೩೪ಮೈಲಿ) ದೂರ ಹರಿಯುತ್ತದೆ. ಇದರ ಜಲಾನಯನ ಪ್ರದೇಶದ ವಿಸ್ತೀರ್ಣ ೮೪೨ ಚಕಿಮೀ. (೩೨೫ ಚಮೈಲಿ) ನದಿಯ ಜಲಾನಯನ ಪ್ರದೇಶದಲ್ಲಿ ೧೧೬ ಕೆರೆಗಳಿವೆ. ಜಕ್ಕಲಮಡುಗು ಮತ್ತು ಶ್ರೀನಿವಾಸಸಾಗರ ಎಂಬ ಎರಡು ಪ್ರಮುಖ ಕೆರೆಗಳಿದೆ. ನದಿಯು ಜಿಲ್ಲೆಯನ್ನು ಬಿಡುವ ಮೊದಲು ಸಿಗುವ ಬಾಬೇನಹಳ್ಳಿ ಸಮೀಪ ಪ್ರಸಿದ್ಧ ವಿದುರಾಶ್ವತ್ಥ ಕ್ಷೇತ್ರವು ಇದೆ. ಈ ನದಿಯು ಹರಿಯುವಾಗ ಹೇರಳವಾದ ಮರಳು ರಾಶಿಯನ್ನು ತಂದುಹಾಕುತ್ತದೆ.

**ಕುಮುದವತಿ :** ಕುಮುದವತಿಯು (ಕುಮುದ್ವತಿ/ಕುಂದಾರ್ ನದಿ) ಬೆಂಗಳೂರು ಜಿಲ್ಲೆಯ ಮಾಕಳಿದುರ್ಗದ ಪಶ್ಚಿಮದಲ್ಲಿ ಉಗಮಿಸಿ, ದೊಡ್ಡಬಳ್ಳಾಪುರ ಹಾಗೂ ಗೌರಿಬಿದನೂರು ತಾಲೂಕುಗಳ ಮೂಲಕ ಉತ್ತರಕ್ಕೆ ಸಾಗಿ, ಕೊರಟಗೆರೆ ಮತ್ತು ಮಧುಗಿರಿ ತಾಲೂಕುಗಳ ಮೂಲಕ ಅನಂತಪುರ ಜಿಲ್ಲೆಗೆ ಹರಿದು, ಹಿಂದೂಪುರದ ಬಳಿ ಉತ್ತರ ಪಿನಾಕಿನಿ ನದಿಯನ್ನು ಸೇರುತ್ತದೆ. ಕುಮುದವತಿ ನದಿಯು ಜಿಲ್ಲೆಯಲ್ಲಿ ೫೬ ಕಿ.ಮೀ (೩೫ ಮೈಲಿ) ದೂರ ಹರಿಯುತ್ತದೆ. ಮಳೆಗಾಲದಲ್ಲಷ್ಟೆ ನದಿಯಲ್ಲಿ ನೀರು ಹರಿಯುತ್ತದೆ. ಇದರ ಜಲಾನಯನ ಪ್ರದೇಶವು ೫೪೪ ಚಕಿ.ಮೀ. (೨೧೦ ಚದುರ ಮೈಲಿ) ಗಳಾಗಿದ್ದು ೭೪ ಕೆರೆಗಳನ್ನು ಹೊಂದಿದೆ. ನದಿಯ ದಂಡೆಯಲ್ಲಿ ರಾಮಾಪುರ, ಇದಗೂರು ಮತ್ತು ಚಂದಂದೂರು ಗ್ರಾಮಗಳಿವೆ.

**ಚಿತ್ರಾವತಿ :** ಉತ್ತರ ಪಿನಾಕಿನಿಯ ಉಪ ನದಿಯಾದ ಚಿತ್ರಾವತಿ ನದಿಯು ನಂದಿಬೆಟ್ಟದ ಉತ್ತರಕ್ಕೆ ೧೪ ಕಿ.ಮೀ. (೯ ಮೈಲಿ) ದೂರದಲ್ಲಿರುವ ಕಲಗನಪಾಳ್ಯ–ಕೊಂಡ ಬೆಟ್ಟಗಳ ಬಳಿ ಉಗಮವಾಗಿ, ವರಲಕೊಂಡ ಬೆಟ್ಟ ಮತ್ತು ಬಾಗೇಪಲ್ಲಿ ತಾಲೂಕಿನ ಮಧ್ಯೆ ಇರುವ ಪ್ರದೇಶದಲ್ಲಿ ಈಶಾನ್ಯಾಭಿಮುಖವಾಗಿ ಹರಿಯುತ್ತದೆ. ಅನಂತರ ಆಂಧ್ರಪ್ರದೇಶದಲ್ಲಿ ಅನಂತಪುರ ಜಿಲ್ಲೆಯ ಹಿಂದೂಪುರ ತಾಲೂಕಿನಲ್ಲಿ ಹರಿದು ಮುಂದೆ ಕಡಪ ಜಿಲ್ಲೆಯ ಗೌಡಲೂರಿನ ಬಳಿ ಉತ್ತರ ಪಿನಾಕಿನಿಯನ್ನು ಸೇರುತ್ತದೆ. ಈ ನದಿಯು ಜಿಲ್ಲೆಯಲ್ಲಿ ಸುಮಾರು ೫೫ ಕಿ.ಮೀ. (೩೦ ಮೈಲಿ) ದೂರ ಹರಿಯುತ್ತದೆ. ನದಿಯ ಜಲಾನಯನ ಕ್ಷೇತ್ರವು /೫೩೯ ಚದುರ ಕಿ.ಮೀ. (೨೦೮ ಚ.ಮೈಲಿ)ಗಳಾಗಿದ್ದು ೨೦೬ ಕೆರೆಗಳನ್ನು ಒಳಗೊಂಡಿದೆ.

**ಕುಶಾವತಿ :** ಕುಶಾವತಿ ಹೊಳೆಯು ನಂದಿಬೆಟ್ಟದ ಉತ್ತರಕ್ಕಿರುವ ಆವಲುಕೊಂಡ ಅಥವಾ ಹಸುವಿನ ಬೆಟ್ಟದ ಬಳಿ ಉಗಮಿಸಿ, ಬೈರಸಾಗರ ಕೆರೆಯ ಮೂಲಕ ಸಾಗಿ, ಗುಡಿಬಂಡೆ ತಾಲೂಕಿನಲ್ಲಿ ಹರಿದು ನಂತರ ರಾಜ್ಯದ ಗಡಿಯಾಚೆ ಇರುವ ಚಿತ್ರಾವತಿ ನದಿಯನ್ನು ಸೇರುತ್ತದೆ. ಈ ಹೊಳೆಯು ಜಿಲ್ಲೆಯಲ್ಲಿ ೪೩ ಕಿ.ಮೀ. (೨೭ ಮೈಲಿ) ದೂರ ಹರಿಯುತ್ತದೆ ಮತ್ತು ೧೭೫ ಚ.ಕಿ.ಮೀ. (೬೭.೫ ಚದುರ ಮೈಲಿ) ಜಲಾನಯನ ಪ್ರದೇಶವನ್ನು ಹೊಂದಿದ್ದು. ಇದರ ವ್ಯಾಪ್ತಿಯಲ್ಲಿ ೫೧ ಕೆರೆಗಳಿವೆ. ಈ ಹೊಳೆಯು ಅಬಕವನಿಪಲ್ಲಿಯ ಉತ್ತರದಲ್ಲಿ ರಾಜ್ಯದ ಗಡಿಯನ್ನು ದಾಟಿ, ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಹಿಂದೂಪುರ ತಾಲೂಕನ್ನು ಪ್ರವೇಶಿಸುತ್ತದೆ.

### ದಕ್ಷಿಣ ಪಿನಾಕಿನಿ

ದಕ್ಷಿಣ ಪಿನಾಕಿನಿ ಅಥವಾ ದಕ್ಷಿಣ ಪೆನ್ನಾರ್ ನದಿಯು, ಜಿಲ್ಲೆಯ ಚಿಕ್ಕಬಳ್ಳಾಪುರ ತಾಲೂಕಿನ ನಂದಿಬೆಟ್ಟದ ವಾಯವ್ಯಕ್ಕೆ ಇರುವ ಚನ್ನರಾಯನ ಬೆಟ್ಟದಲ್ಲಿ ಉಗಮಿಸುತ್ತದೆ. ಪೂರ್ವಾಭಿಮುಖವಾಗಿ ಶಿಡ್ಲಘಟ್ಟದವರೆಗೂ ಹರಿದು ಅನಂತರ ದಕ್ಷಿಣಾಭಿಮುಖವಾಗಿ ತಿರುಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲೂಕಿನ ವಿಜಯಪುರದ ದಕ್ಷಿಣದ ಕಡೆ ಪ್ರವೇಶಿಸುತ್ತದೆ. ಮುಂದೆ ಹೊಸಕೋಟೆ ತಾಲೂಕಿನ ಮಧ್ಯದಲ್ಲಿ ದಕ್ಷಿಣಾಭಿಮುಖವಾಗಿ ಹರಿದು, ಆ ತಾಲೂಕಿನ ಗುಂಡೂರಿನ ಬಳಿ ರಾಜ್ಯದ ಎಲ್ಲೆಯನ್ನು ದಾಟುತ್ತದೆ. ನಂತರ ತಮಿಳುನಾಡಿನ ಧರ್ಮಪುರಿ ಮತ್ತು ದಕ್ಷಿಣ ಆರ್ಕಾಟ್ ಜಿಲ್ಲೆಗಳ ಮುಖಾಂತರ ಹರಿದು, ಕಡಲೂರಿನ ಉತ್ತರದಲ್ಲಿ ಬಂಗಾಳಕೊಲ್ಲಿಯನ್ನು ಸೇರುತ್ತದೆ. ಇದು ಉಗಮ ಸ್ಥಾನದಿಂದ ಸುಮಾರು ೮೦ ಕಿ.ಮೀ. ರಾಜ್ಯದಲ್ಲಿ ಹಾಗೂ ಸುಮಾರು ೩೯ ಕಿ.ಮೀ. ದೂರ ಜಿಲ್ಲೆಯಲ್ಲಿ ಹರಿಯುತ್ತದೆ. ನದಿಯ ಜಲಾನಯನ ಪ್ರದೇಶ ೫೦ ಚ.ಕಿ.ಮೀ. ಆಗಿರುತ್ತದೆ.

### ಪಾಪಾಘ್ನಿ

ಪಾಪಾಘ್ನಿ ನದಿಯು ಜಿಲ್ಲೆಯಲ್ಲಿ ಹರಿಯುವ ಸಣ್ಣ ನದಿಯಾಗಿದೆ. ಇದರ ಹೆಸರೇ ಸೂಚಿಸುವಂತೆ ಪಾಪನಿವಾರಕ ನದಿಯೆಂದು ಪರಿಗಣಿತವಾಗಿದೆ. ಚಿಕ್ಕಬಳ್ಳಾಪುರ ತಾಲೂಕಿನ ಕಳವರ ದುರ್ಗದಲ್ಲಿ ಹುಟ್ಟಿ ಈಶಾನ್ಯಾಭಿಮುಖವಾಗಿ ಶಿಡ್ಲಘಟ್ಟ ತಾಲೂಕಿನ ಕಣಿವೆಗಳಲ್ಲಿ ಹರಿದು, ಬಾಗೇಪಲ್ಲಿ ತಾಲೂಕಿನ ಮೂಲಕ ಚಿತ್ತೂರು ಜಿಲ್ಲೆಯಲ್ಲಿ ಪ್ರವಹಿಸಿ ಮುಂದೆ ಉತ್ತರ ಪಿನಾಕಿನಿಯನ್ನು ಸೇರುತ್ತದೆ. ಜಿಲ್ಲೆಯ ಅಂಚಿನಲ್ಲೇ ಆಂಧ್ರಪ್ರದೇಶದ ಕಡೆಗೆ ನದಿಗೆ ಅಡ್ಡಲಾಗಿ ವ್ಯಾಸಸಮುದ್ರ ಕೆರೆ ಇದೆ. ಜಿಲ್ಲೆಯಲ್ಲಿ ಈ ನದಿ ಹರಿಯುವ ದೂರ ಸುಮಾರು ೬೮ ಕಿ.ಮೀ.ಗಳಾಗಿದ್ದು, ಸುಮಾರು ೮೬೦ ಚಕಿ.ಮೀ. ಜಲಾನಯನ ಪ್ರದೇಶವನ್ನು ಹೊಂದಿದೆ

### ಇತರ ಹೊಳೆ (ತೊರೆ)ಗಳು

ಕೌಂಡಿಣ್ಯ ನದಿಯ ಉಪನದಿಯಾದ ನಂಗ್ಲಿ ಹೊಳೆ ಮುಳಬಾಗಿಲು ಬಳಿಯ ಕುರುಡುಮಲೆಯಲ್ಲಿ ಉಗಮಿಸಿ, ಪೂರ್ವಾಭಿಮುಖವಾಗಿ ಹರಿದು ಜಿಲ್ಲೆಯನ್ನು ದಾಟಿಹೋಗುತ್ತದೆ. ಜಿಲ್ಲೆಯಲ್ಲಿ ನಂಗ್ಲಿ ಹೊಳೆಯು ೨೯ ಕಿ.ಮೀ ದೂರ ಹರಿಯುತ್ತದೆ ಮತ್ತು ೨೮೦ ಚ.ಕಿ.ಮೀ. (೧೦೮ ಚದುರ ಮೈಲಿ) ಜಲಾನಯನ ಪ್ರದೇಶ ಹೊಂದಿದೆ.

ಕುಶಾವತಿ ಎಂಬ ಹೆಸರಿನ ಎರಡು ಹೊಳೆಗಳಿದ್ದು, ಒಂದು ಪಾಪಾಘ್ನಿಯನ್ನು ಮತ್ತೊಂದು ಚಿತ್ರಾವತಿ ನದಿಯನ್ನೂ ಸೇರುತ್ತವೆ. ಮೊದಲನೆಯ ಹೊಳೆಯು, ಆಂಧ್ರಪ್ರದೇಶದ ಪುಂಗನೂರಿನ ಪೂರ್ವಕ್ಕಿರುವ ವಾಲೀಶ್ವರ ಬೆಟ್ಟದ ಬಳಿ ಉಗಮಿಸಿ, ಶ್ರೀನಿವಾಸಪುರ ತಾಲೂಕಿನಲ್ಲಿ ಹರಿದು, ಮತ್ತೆ ಆಂಧ್ರಪ್ರದೇಶಕ್ಕೆ ಸಾಗುತ್ತದೆ. ಇದನ್ನು ಗುಂಡೆದು ನದಿ ಎಂದೂ ಕರೆಯುತ್ತಾರೆ.

ಜಿಲ್ಲೆಯಲ್ಲಿ ಈ ಹೊಳೆಯು ೫೯ ಕಿ.ಮೀ. ಹರಿಯುತ್ತದೆ. ಇದರ ಜಲಾನಯನ ಪ್ರದೇಶದ ವ್ಯಾಪ್ತಿ ೩೪೪ ಚ.ಕಿ.ಮೀ.(೧೩೩ ಚದುರ ಮೈಲಿ)ಗಳು. ಈ ಜಲಾನಯನ ಪ್ರದೇಶದಲ್ಲಿ ೨೪೯ ಕೆರೆಗಳಿವೆ. ಗೊಂಪಲ್ಲಿ, ಬೂರಗನಪಲ್ಲಿ ಮತ್ತು ಪತಕೋಟೆ ಈ ಹೊಳೆಯ ದಂಡೆಯಲ್ಲಿರುವ ಪ್ರಮುಖ ಗ್ರಾಮಗಳಾಗಿವೆ. ಈ ಹಿಂದೆ, ಎರಡನೆ ಕುಶಾವತಿ ಹೊಳೆಯು ಚಿತ್ರಾವತಿ ನದಿಯನ್ನು ಸೇರುವ ವಿವರವನ್ನು ನೀಡಿದೆ.

ಮಾರ್ಕಂಡೇಯ ಹೊಳೆ ಜಿಲ್ಲೆಯ ಮತ್ತೊಂದು ಹೊಳೆಯಾಗಿದೆ. ಇದು ಕೋಲಾರ ತಾಲೂಕಿನ ವಕ್ಕಲೇರಿ ಬೆಟ್ಟಗಳ ಮೇಲೆ ಮತ್ತು ಮಾಲೂರು ತಾಲೂಕಿನ ಟೇಕಲ್ ಬೆಟ್ಟಗಳ ಮೇಲೆ ಉಗಮಿಸುವ ಎರಡು ತೊರೆಗಳು, ಬಂಗಾರಪೇಟೆ ತಾಲೂಕಿನ ಬೂದಿಕೋಟೆ ಎಂಬಲ್ಲಿ ಸೇರಿ ಮಾರ್ಕಂಡೇಯ ನದಿಯಾಗಿ ದಕ್ಷಿಣದತ್ತ ಹರಿದು ವೃಷಭಾವತಿಯನ್ನು ಸೇರಿಕೊಳ್ಳುವುದು. ಈ ಹೊಳೆಯು ತಮಟಮಕನಹಳ್ಳಿಯ ಬಳಿ ೫೦ ಅಡಿ ಎತ್ತರದ ಜಲಪಾತವನ್ನು ಉಂಟುಮಾಡುತ್ತದೆ. ಜಿಲ್ಲೆಯಲ್ಲಿ ಸುಮಾರು ೫೦ ಕಿ.ಮೀ. ದೂರ ಹರಿಯುತ್ತದೆ. ಇದರ ಜಲಾನಯನ ಪ್ರದೇಶ ೪೩೫ ಚ.ಕಿ.ಮೀ. (೧೬೮ ಚದುರ ಮೈಲಿ)ಗಳಾಗಿದ್ದು, ೨೬೪ ಕೆರೆಗಳನ್ನು ಹೊಂದಿದೆ. ತೊರಲಕ್ಕಿ, ಬೂದಿಕೋಟೆ ಗ್ರಾಮಗಳು ಈ ನದಿಯ ದಂಡೆಯಲ್ಲಿರುವ ಪ್ರಮುಖ ಗ್ರಾಮಗಳಾಗಿವೆ.

ಕಾವೇರಿಯ ಉಪನದಿಗಳಲ್ಲಿ ಒಂದಾದ ಅರ್ಕಾವತಿಯು ನಂದಿದುರ್ಗದಲ್ಲಿ ಉಗಮಿಸುವುದು. ಇದು ಜಿಲ್ಲೆಯನ್ನು ದಾಟಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕನ್ನು ಸೇರುತ್ತದೆ. ನದಿಯು ಕೇವಲ ಒಂದು ಕಿ.ಮೀ ದೂರ ಮಾತ್ರ ಜಿಲ್ಲೆಯಲ್ಲಿ ಹರಿಯುತ್ತದೆ.

ದಕ್ಷಿಣ ಪಿನಾಕಿನಿ ನದಿಯ ಉಪನದಿಯಾದ ವೃಷಭಾವತಿಯು ವಕ್ಕಲೇರಿ ಬೆಟ್ಟದಲ್ಲಿ ಹುಟ್ಟುತ್ತದೆ. ಬಂಗಾರಪೇಟೆ ತಾಲೂಕಿನ ಮೂಲಕ ಹರಿದು, ಕಾಮಸಂದ್ರದ ಬಳಿ ದಕ್ಷಿಣಕ್ಕೆ ತಮಿಳುನಾಡು ರಾಜ್ಯದ ಧರ್ಮಪುರಿ ಜಿಲ್ಲೆಯ ಹೊಸೂರು ತಾಲೂಕನ್ನು ಪ್ರವೇಶಿಸುತ್ತದೆ. ಜಿಲ್ಲೆಯಲ್ಲಿ ಈ ನದಿಯ ಉದ್ದ ೫೮ ಕಿ.ಮೀ. ಆಗಿದ್ದು, ಇದರ ಜಲಾನಯನ ಪ್ರದೇಶ, ೩೪೭ ಚ.ಕಿ.ಮೀ.ಗಳಾಗಿದೆ. ಇದರ ಜಲಾನಯನ ಪ್ರದೇಶದಲ್ಲಿ ೨೬೪ ಕೆರೆಗಳಿವೆ. ಕಾಮಸಮುದ್ರ ಮತ್ತು ಬಂಗಾರಪೇಟೆ ವೃಷಭಾವತಿ ನದಿಯ ದಂಡೆಯ ಮೇಲಿನ ಪ್ರಮುಖ ಗ್ರಾಮಗಳಾಗಿವೆ.

ಪಾಪಾಘ್ನಿಯ ಉಪನದಿಯಾದ ವಂದಮಾನ ಹೊಳೆಯು, ಬಾಗೇಪಲ್ಲಿ ತಾಲೂಕಿನ ಮಿಟ್ಟೆಮರಿ ಪೂರ್ವದಲ್ಲಿರುವ ಇಟಕಲ್ ಬೆಟ್ಟದಲ್ಲಿ ಉಗಮಿಸುತ್ತದೆ. ನಂತರ ಪೂರ್ವದೆಡೆ ಹರಿದು ಆಂಧ್ರಪ್ರದೇಶದಲ್ಲಿ ಪಾಪಾಘ್ನಿಯನ್ನು ಕೂಡಿಕೊಳ್ಳುತ್ತದೆ. ಜಿಲ್ಲೆಯಲ್ಲಿ ಈ ಹೊಳೆಯ ಉದ್ದ ೨೫ ಕಿ.ಮೀ ಗಳಾಗಿದ್ದು ಸುಮಾರು ೫೪ ಚ.ಕಿ.ಮೀ.(೨೧ ಚದುರ ಮೈಲಿ)ಗಳಷ್ಟು ಜಲಾನಯನ ಪ್ರದೇಶವನ್ನು ಹೊಂದಿದೆ. ಈ ಜಲಾನಯನ ಪ್ರದೇಶದಲ್ಲಿ ೧೩೭ ಕೆರೆಗಳಿವೆ. ಜಿಲ್ಲೆಯ ಜಲಾನಯನ ಪ್ರದೇಶಗಳ ಶೇಕಡಾವಾರು ವಿವರಗಳನ್ನು ಕೋಷ್ಟಕ–೧.೫ರಲ್ಲಿ ನೀಡಲಾಗಿದೆ.

**ಕೋಷ್ಟಕ ೧.೫: ಜಲಾನಯನ ಪ್ರದೇಶದ ವಿವರ**

**(ಶೇಕಡಾವಾರು ಭೌಗೋಳಿಕ ಪ್ರದೇಶ ಚ.ಕಿ.ಮೀ.ಗಳಲ್ಲಿ)**

| ಕ್ರಸಂ | ಪ್ರದೇಶ | ಉತ್ತರ ಪಿನಾಕಿನಿ ಜಲಾನಯನ | ದಕ್ಷಿಣ ಪಿನಾಕಿನಿ ಜಲಾನಯನ | ಪಾಲಾರ್ ಜಲಾನಯನ | ಒಟ್ಟು |
|---|---|---|---|---|---|
| ೧ | ೨ | ೩ | ೪ | ೫ | ೬ |
| ೧. | **ಬಾಗೇಪಲ್ಲಿ** | ೧೦೦ | – | – | ೧೦೦ |
| ೨. | **ಬಂಗಾರಪೇಟೆ** | – | ೬೫ | ೩೫ | ೧೦೦ |
| ೩. | **ಚಿಕ್ಕಬಳ್ಳಾಪುರ** | ೭೮ | ೨೨ | – | ೧೦೦ |
| ೪. | **ಚಿಂತಾಮಣಿ** | ೬೦ | ೫ | ೩೫ | ೧೦೦ |
| ೫. | **ಗೌರಿಬಿದನೂರು** | ೧೦೦ | – | – | ೧೦೦ |
| ೬ | **ಗುಡಿಬಂಡೆ** | ೧೦೦ | – | – | ೧೦೦ |

| ೧ | ೨ | ೩ | ೪ | ೫ | ೬ |
|---|---|---|---|---|---|
| ೭ | **ಕೋಲಾರ** | – | ೧೧ | ೯೦ | ೧೦೦ |
| ೮ | **ಮಾಲೂರು** | – | ೯೩ | ೭ | ೧೦೦ |
| ೯. | **ಮುಳಬಾಗಲು** | – | – | ೧೦೦ | ೧೦೦ |
| ೧೦. | **ಶಿಡ್ಲಘಟ್ಟ** | ೬೫ | ೨೫ | ೧೧ | ೧೦೦ |
| ೧೧. | **ಶ್ರೀನಿವಾಸಪುರ** | ೬೦ | – | ೪೦ | ೧೦೦ |

ಮೂಲ: ನೀರಾವರಿ ಇಲಾಖೆ, ಬೆಂಗಳೂರು.

ಒಟ್ಟು ೮,೨೨೩ ಚ.ಕಿ.ಮೀ. ಜಲಾನಯನ ಪ್ರದೇಶದಲ್ಲಿ ೪,೧೧೨ (ಶೇ. ೫೦) ಚ.ಕಿ.ಮೀ. ಉತ್ತರ ಪಿನಾಕಿನಿ ಜಲಾನಯನ, ೧,೫೬೨ ಚ.ಕಿ.ಮೀ. (ಶೇ.೧೯) ದಕ್ಷಿಣ ಪಿನಾಕಿನಿ ಜಲಾನಯನ ಪ್ರದೇಶ ಮತ್ತು ೨,೫೪೯ ಚ.ಕಿ.ಮೀ. (ಶೇ.೩೧) ಪಾಲಾರ್ ಜಲಾನಯನ ಪ್ರದೇಶವಾಗಿದೆ.

**ಅಂತರ್ಜಲ ಸಂಪನ್ಮೂಲಗಳು**

ಕೋಲಾರ ಜಿಲ್ಲೆಯು ರಾಜ್ಯದ ಪೂರ್ವ ಕೃಷಿ ವಲಯದಲ್ಲಿದ್ದು, ವಾರ್ಷಿಕ ಸರಾಸರಿ ೭೪೪ ಮಿ.ಮೀ ಮಳೆ ಆಗುತ್ತದೆ. ಇಲ್ಲಿ ಶೇ ೭೦ ಕ್ಕಿಂತಲೂ ಹೆಚ್ಚಿನ ಭಾಗ ಮುಂಗಾರು ಮಾರುತಗಳ ಮಳೆಯಾಗುತ್ತದೆ. ವಾರ್ಷಿಕ ಸರಾಸರಿ ಮಳೆಯಾಗುವ ದಿನಗಳು ೪೮. ಮುಂಗಾರು ಮಳೆಯು ಅನಿಶ್ಚಿತವಾಗಿದೆ ಹಾಗೂ ಮಳೆಯ ಪ್ರಮಾಣ ಏರುಪೇರಾಗಿ ಬರಗಾಲ ಉಂಟಾಗುವ ಪರಿಸ್ಥಿತಿ ಸಾಮಾನ್ಯವಾಗಿದೆ. ಜಿಲ್ಲೆಯಲ್ಲಿ ಜೀವನದಿಗಳಿಲ್ಲದ ಪ್ರಯುಕ್ತ ಅಂತರ್ಜಲ ಸಂಪನ್ಮೂಲವು ಪ್ರಮುಖ ನೀರಾವರಿ ಮೂಲವಾಗಿದೆ. ನಿವ್ವಳ ಬಿತ್ತನೆ ಪ್ರದೇಶದ ಶೇ ೧೮.೮ ರಷ್ಟು ಭಾಗ ಮಾತ್ರ ನೀರಾವರಿಗೆ ಒಳಪಟ್ಟಿದೆ. ಜಿಲ್ಲೆಯಲ್ಲಿ ೩,೨೨೮ ಕ್ಕೂ ಹೆಚ್ಚು ನೀರಾವರಿ ಕೆರೆಗಳಿದ್ದರೂ, ಮುಂಗಾರು ಮಳೆಯಾದರೆ ಮಾತ್ರ ಕೆರೆಗಳಿಗೆ ನೀರು ಬರುತ್ತದೆ. ಬೇಸಿಗೆಯಲ್ಲಿ ಬಹುತೇಕ ಕೆರೆಗಳು ನೀರಿಲ್ಲದೆ ಒಣಗಿರುತ್ತವೆ. ಹೀಗಾಗಿ ಬಾವಿಗಳು ಮತ್ತು ಕೊಳವೆ ಬಾವಿಗಳು ಮಾತ್ರ ಪ್ರಮುಖ ನೀರಾವರಿ ಮೂಲಗಳಾಗಿವೆ. ಕೋಲಾರ, ಮಾಲೂರು, ಶ್ರೀನಿವಾಸಪುರ, ಚಿಕ್ಕಬಳ್ಳಾಪುರ, ಗೌರಿಬಿದನೂರು ಮತ್ತು ಬಂಗಾರಪೇಟೆ ತಾಲೂಕುಗಳಲ್ಲಿ ಬಾವಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ರೈತರು ತಮ್ಮ ಕೊಳವೆ ಬಾವಿಗಳನ್ನು ಸ್ವಂತ ವೆಚ್ಚದಲ್ಲಿ ತೆಗೆಸಿದ್ದು, ಒಂದು ಕೊಳವೆ ಬಾವಿಯಿಂದ ಮತ್ತೊಂದಕ್ಕೆ ಇರಬೇಕಾದ ಕನಿಷ್ಠ ದೂರದ ನಿಯಮವನ್ನು ಅನುಸರಿಸದಿರುವ ಪ್ರಯುಕ್ತ, ಅನೇಕ ಕೊಳವೆ ಬಾವಿಗಳಲ್ಲಿ ನೀರಿನ ಮೂಲ ಕಡಿಮೆಯಾಗಿದ್ದು, ಕೆಲವು ನೀರಿಲ್ಲದೆ ಒಣಗುವ ಪರಿಸ್ಥಿತಿ ತಲುಪಿವೆ. ಶೇಕಡಾವಾರು ಉಪಯೋಗಿಸಲ್ಪಡುವ ಅಂತರ್ಜಲ ಪ್ರಮಾಣವನ್ನು ಆಧರಿಸಿ ಜಿಲ್ಲೆಯ ತಾಲೂಕುಗಳನ್ನು ಬಿಳಿ (ಶೇ.೬೫ರವರೆಗೆ) ಬೂದು (ಶೇ. ೬೫ ರಿಂದ ಶೇ.೮೫) ಮತ್ತು ಕಪ್ಪು (ಶೇ. ೮೫ ಕ್ಕಿಂತ ಹೆಚ್ಚು) ವರ್ಗಗಳೆಂದು ವಿಂಗಡಿಸಲಾಗಿದೆ. ಇತ್ತೀಚಿನ ಅಂದಾಜಿನಂತೆ ಜಿಲ್ಲೆಯ ೧೧ ತಾಲೂಕುಗಳಲ್ಲಿ ನಾಲ್ಕು ತಾಲೂಕುಗಳನ್ನು ಬೂದು ವರ್ಗಕ್ಕೆ ಐದು ತಾಲೂಕುಗಳನ್ನು ಕಪ್ಪು ವರ್ಗಕ್ಕೆ ಮತ್ತು ಉಳಿದ ಎರಡು ತಾಲೂಕಗಳನ್ನು ಬಿಳಿ ವರ್ಗಕ್ಕೆ ಸೇರಿಸಲಾಗಿದೆ. ಕಪ್ಪು ವರ್ಗಕ್ಕೆ ಸೇರಿದ ಚಿಕ್ಕಬಳ್ಳಾಪುರ, ಕೋಲಾರ, ಮಾಲೂರು, ಚಿಂತಾಮಣಿ ಮತ್ತು ಶಿಡ್ಲಘಟ್ಟ ತಾಲೂಕುಗಳಲ್ಲಿ ಹೊಸ ಕೊಳವೆ ಬಾವಿಗಳಿಗೆ ಅವಕಾಶವಿರುವುದಿಲ್ಲ. ೧೯೬೫ ರಲ್ಲಿ ಜಿಲ್ಲೆಯಲ್ಲಿ ಅಂತರ್ಜಲದ ಮಟ್ಟ ೪೦ ಅಡಿಗಳಿದ್ದಿತು, ಪ್ರಸ್ತುತ ಅದು ಕೆಲವೆಡೆ ೬೫೦ ಅಡಿ ಆಳಕ್ಕೆ ಇಳಿದಿದೆ. ಜಿಲ್ಲೆಯಲ್ಲಿರುವ ಕೆರೆಗಳು ಅಂತರ್ಜಲ ಭರ್ತಿಗೆ ಸಹಕಾರಿಯಾಗಿದ್ದರೂ, ಬಹುತೇಕ ಕೆರೆಗಳು ಶೇ. ೬೦ ಕ್ಕಿಂತಲೂ ಹೆಚ್ಚು ಭಾಗ ಹೂಳಿನಿಂದ ಕೂಡಿವೆ. ಅತಿ ನಯವಾದ ಹೂಳು ನೀರು ಇಂಗುವಿಕೆಯನ್ನು ತಪ್ಪಿಸಿ ಅಂತರ್ಜಲ ಭರ್ತಿಗೆ ತಡೆ ಉಂಟುಮಾಡುತ್ತದೆ ಹಾಗೂ ಕೆರೆಗಳ ಅಂಗಳಗಳ ಒತ್ತುವರಿಯಿಂದಾಗಿ ನೀರು ಇಂಗುವ ಪ್ರದೇಶವು ಸಹ ಕಡಿಮೆಯಾಗಿದೆ. ಅಂತರ್ಜಲಕ್ಕೆ ಪೂರಕವಾದ ಬಾವಿಗಳು ಸಹ ಮಳೆಗಾಲದಲ್ಲಿ ಮಾತ್ರ ತುಂಬುತ್ತಿದ್ದು, ಬೇಸಿಗೆಯಲ್ಲಿ ಅವುಗಳ ಪಾತ್ರ ಬಹುತೇಕ ಅಲ್ಪವಾಗಿದೆ.

**ಭೂ ವಿಜ್ಞಾನ**

ಜಿಲ್ಲೆಯು ಬಹುಮಟ್ಟಿಗೆ ನೈಸ್ ಕಣ ಶಿಲೆಯ ಪ್ರದೇಶವಾಗಿದೆ. ಶ್ರೀನಿವಾಸಪುರದಿಂದ ದಕ್ಷಿಣಾಭಿಮುಖವಾಗಿ ಜಿಲ್ಲೆಯ ಅಂಚಿನವರೆಗೆ ಸುಮಾರು ಆರು ಕಿ.ಮೀ. ಅಗಲದ ಶಿಸ್ಟ್ ಕಲ್ಲಿನ ಪಟ್ಟಿಯೊಂದು ಹಬ್ಬಿದೆ. ಜಿಲ್ಲೆಯ ಹೆಚ್ಚಿನ ಭಾಗದಲ್ಲಿ ಅಲ್ಪ ಸ್ವಲ್ಪ

**ಕೋಷ್ಟಕ ೧.೬ ಕೋಲಾರ ಜಿಲ್ಲೆಯಲ್ಲಿನ ಅಂತರ್ಜಲ ಸಂಪನ್ಮೂಲಗಳು**

| ತಾಲೂಕು | ಒಟ್ಟು ವಾರ್ಷಿಕ ಅಂತರ್ಜಲ ಉತ್ಕರ್ಷ ಹೆ.ಮೀ | ನಿವ್ವಳ ಅಂತರ್ಜಲ ಉತ್ಕರ್ಷ ಹೆ.ಮೀ | ನಿವ್ವಳ ಅಂತರ್ಜಲ ಬಳಕೆ ಜೂನ್ ೨೦೦೨ ರಲ್ಲಿ ಹೆ.ಮೀ | ಒಟ್ಟು ನೀರಾವರಿ ಬಾವಿಗಳು | ತಾಲೂಕಿನ ವರ್ಗೀಕರಣ |
|---|---|---|---|---|---|
| **ಕೋಲಾರ** | ೮,೫೪೮ | ೭,೫೬೬ | ೭,೦೭೬ | ೯,೭೪೩ | ಕಪ್ಪು |
| **ಗುಡಿಬಂಡೆ** | ೨,೪೩೧ | ೨,೦೬೭ | ೯೭೧ | ೨,೧೭೮ | ಬಿಳಿ |
| **ಗೌರಿಬಿದನೂರು** | ೧೦,೪೩೯ | ೮,೮೭೩ | ೬,೧೭೧ | ೧೦,೮೦೨ | ಬೂದು |
| **ಚಿಂತಾಮಣಿ** | ೯,೬೪೩ | ೭,೦೮೨ | ೭,೧೫೮ | ೧೧,೩೨೭ | ಕಪ್ಪು |
| **ಚಿಕ್ಕಬಳ್ಳಾಪುರ** | ೫,೭೦೪ | ೪,೮೪೯ | ೮,೫೩೧ | ೯,೮೮೮ | ಕಪ್ಪು |
| **ಬಂಗಾರಪೇಟೆ** | ೯,೭೯೧ | ೮,೩೨೩ | ೪,೪೫೨ | ೮,೪೪೯ | ಬಿಳಿ |
| **ಬಾಗೇಪಲ್ಲಿ** | ೮,೩೩೨ | ೭,೦೮೨ | ೪,೯೧೩ | ೫,೧೯೪ | ಬೂದು |
| **ಮಾಲೂರು** | ೫,೯೭೮ | ೫,೦೮೧ | ೫,೯೩೯ | ೭,೬೭೦ | ಕಪ್ಪು |
| **ಮುಳಬಾಗಿಲು** | ೧೦,೩೧೪ | ೮,೭೬೭ | ೩,೯೩೭ | ೬,೭೫೭ | ಬೂದು |
| **ಶಿಡ್ಲಘಟ್ಟ** | ೬,೩೯೧ | ೫,೪೩೨ | ೫,೩೭೫ | ೧೦,೩೯೧ | ಕಪ್ಪು |
| **ಶ್ರೀನಿವಾಸಪುರ** | ೯,೫೪೨ | ೮,೧೧೧ | ೫,೧೨೭ | ೬,೪೦೦ | ಬೂದು |
| ಜಿಲ್ಲೆಯ ಒಟ್ಟು | **೮೭,೧೧೩** | **೭೩,೨೩೩** | **೫೯,೬೫೦** | **೮೮,೭೯೯** | |

ಮೂಲ: ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು

ಏರುತಗ್ಗುಗಳು ಹರಡಿದ್ದು, ಕಣಶಿಲೆಯ ಬೆಟ್ಟಗುಡ್ಡಗಳು ಅಲ್ಲಲ್ಲಿ ಉದ್ಭವಿಸಿರುತ್ತವೆ. ದೊಡ್ಡ ದೊಡ್ಡ ಬಂಡೆಗಳನ್ನು ಒಂದರ ಮೇಲೊಂದು ವಿಚಿತ್ರಾಕಾರದಲ್ಲಿ ಪೇರಿಸಿದಂತಿರುವ ಈ ಬೆಟ್ಟಗಳು ಜಿಲ್ಲೆಯ ವೈಶಿಷ್ಟ್ಯವಾಗಿವೆ. ಶಿಸ್ಟ್ ಕಲ್ಲಿನ ಪಟ್ಟಿಯ ಪ್ರದೇಶವು ಆರ್ಥಿಕ ಪ್ರಾಮುಖ್ಯತೆಯನ್ನು ಪಡೆದಿದೆ. ಇದಕ್ಕೆ ಹೊಂದಿಕೊಂಡಂತೆ ಕ್ವಾರ್ಟ್ಜೈಟ್, ಬೆಣಚುಕಲ್ಲು ಮುಂತಾದ ವಿವಿಧ ಶಿಲೆಗಳ ಸಮುದಾಯವಿದೆ. ಇದರ ಜೊತೆಯಲ್ಲಿ ಪ್ರಸಿದ್ಧವಾದ ಚಿನ್ನದ ಭೂನಿಕ್ಷೇಪಗಳು ಹಬ್ಬಿವೆ. ಜೊತೆಗೆ ಜಿಲ್ಲೆಯ ಹಲವು ಭಾಗಗಳಲ್ಲಿ ಉತ್ತರ–ದಕ್ಷಿಣ ಹಾಗೂ ಪೂರ್ವ–ಪಶ್ಚಿಮವಾಗಿ ಡಾಲರೈಟ್‌ನ ಸಾಲುಗಳು ಹಬ್ಬಿವೆ.

ನಂದಿದುರ್ಗವು ಜಿಲ್ಲೆಯ ಎತ್ತರದ ಪ್ರದೇಶವಾಗಿದ್ದು, ಜಿಲ್ಲೆಯ ಜಲಾನಯನಗಳನ್ನು ಬೇರ್ಪಡಿಸುತ್ತಿದೆ. ಹಾಗೂ ನದಿಗಳ ಉಗಮಸ್ಥಾನವಾಗಿದೆ. ಉತ್ತರದಲ್ಲಿಯ ಉತ್ತರ ಪಿನಾಕಿನಿ ಮತ್ತು ದಕ್ಷಿಣದಲ್ಲಿಯ ಪಾಲಾರ್ ಈ ಎರಡು ನದಿಗಳ ಕಣಿವೆಗಳನ್ನು ಶ್ರೀನಿವಾಸಪುರದಿಂದ–ಚಿಕ್ಕಬಳ್ಳಾಪುರದವರೆಗೆ ಎಳೆದ ಕಾಲ್ಪನಿಕ ರೇಖೆಯಿಂದ ಬೇರ್ಪಡಿಸಬಹುದು. ಈ ರೇಖೆಯಿಂದ ಉತ್ತರ ಮತ್ತು ದಕ್ಷಿಣ ಪ್ರದೇಶಗಳು ಸಾಮಾನ್ಯವಾಗಿ ಇಳಿಜಾರಿನಿಂದ ಕೂಡಿವೆ. ಜಿಲ್ಲೆಯ ಮಧ್ಯ ಮತ್ತು ಪೂರ್ವ ಭಾಗಗಳು ಪಾಲಾರ್ ನದಿ ಕಣಿವೆ ಪ್ರದೇಶಗಳಾಗಿದೆ. ಉತ್ತರ ಪಿನಾಕಿನಿ ನದಿ ಕಣಿವೆಯು ಗೌರಿಬಿದನೂರಿನ ಕಡೆಗೆ ಹೋದಂತೆ ಇಳಿಜಾರಾಗಿದೆ. ಪೂರ್ವದಲ್ಲಿ ಮೊಗಿಲಿ ಮತ್ತು ನಾಯಕನೇರಿ ಕಣಿವೆ ಮಾರ್ಗಗಳು ಜಿಲ್ಲೆಯ ಎಲ್ಲೆಯಿಂದ ಸ್ವಲ್ಪ ದೂರದಲ್ಲಿವೆ. ಸಮುದ್ರ ಮಟ್ಟದಿಂದ ಜಿಲ್ಲೆಯ ಕೋಲಾರ ನಗರವು ೮೦೦ ಮೀ., ಮಾಲೂರು ೮೫೪ ಮೀ. ಹಾಗೂ ಅಂಬಾಜಿದುರ್ಗ ತಪ್ಪಲಿನ ಪ್ರದೇಶ ೮೩೯ ಮೀ ಎತ್ತರದಲ್ಲಿವೆ.

ಭೂವಿಕಾಸನದ ಆರ್ಕಿಯನ್‌ದ ಕೊನೆಯ ಕಾಲಕ್ಕೆ ಅಂದರೆ, ಎರಡೂವರೆ ಶತಕೋಟಿ ವರ್ಷಗಳ ಹಿಂದೆ ಎರಡು ಭೂಹಾಳೆಗಳು ಡಿಕ್ಕಿ ಹೊಡೆದುದರ ಗುರುತುಗಳನ್ನು ದಕ್ಷಿಣ ಭಾರತದ ಬಂಡೆಗಳ ರಚನೆಯಲ್ಲಿ ಕ್ರೋಗ್‌ಸ್ಟಾಡ್ ಮತ್ತು ಗಿಲ್ಬರ್ಟ್

ಹ್ಯಾನ್‌ಸನ್‌ರವರು ಪತ್ತೆಹಚ್ಚಿದ್ದಾರೆ. ಈ ಶಿಲಾರಚನೆಗೆ ಕೋಲಾರ ಹರಳುಗಟ್ಟಿದ ಹಸಿರು ರೂಪಾಂತರ ಶಿಲೆಯ ಪಟ್ಟಿ ಎಂದು ಕರೆಯಲಾಗಿದೆ. ಇದರ ಅಗಲ ನಾಲ್ಕು ಕಿ.ಮೀ ಮತ್ತು ಉದ್ದ ೮೦ ಕಿ.ಮೀ. ಇದು ಹಸಿರು ಬಣ್ಣದ ಅಗ್ನಿ ಶಿಲೆಗಳ ನೀಳ ರಚನೆಗೆ ಉದಾಹರಣೆಯಾಗಿದೆ. ಭೂಖಂಡಗಳ ಪುರಾತನ ತಿರುಳುಗಳಲ್ಲಿ ಪ್ರಪಂಚದಾದ್ಯಂತ ಇಂತಹ ಪಚ್ಚೆಕಲ್ಲಿನ ಪಟ್ಟಿಗಳು (ಒಫಿಯೋಲೈಟ್) ಕಂಡು ಬಂದಿವೆ. ಮಬ್ಬುಬಣ್ಣದ ಗ್ರಾನೈಟ್ ಮತ್ತು ಬೆಣಚು ಕಲ್ಲಿನ ರಾಶಿಗಳ ನಡುವೆ ಇದು ಕಪ್ಪು ಹಾವಿನಂತೆ ಹಾದು ಹೋಗಿರುತ್ತದೆ. ಕೋಲಾರದ ಚಿನ್ನದ ಗಣಿ ಪ್ರದೇಶವೂ ಹಸಿರು ಕಲ್ಲಿನ ಪದರುಗಳಲ್ಲಿದೆ. ಶಿಲೆಗಳಲ್ಲಿ ಯುರೇನಿಯಂ ವಿಕಿರಣಪಾತವನ್ನು ಅಳೆದು, ಹಸಿರು ರೂಪಾಂತರ ಶಿಲೆಯ ಪಟ್ಟಿಯ ಪೂರ್ವಕ್ಕಿರುವ ಖಂಡಶಿಲೆಗಳು ಪಶ್ಚಿಮಕ್ಕಿರುವ ಖಂಡಶಿಲೆಗಳಂತೆ ನೂರಾರು ದಶಲಕ್ಷ ವರ್ಷಗಳಿಗೂ ಕಡಿಮೆ ವಯಸ್ಸಿನವು ಎಂಬುದನ್ನು ಕ್ರೊಗ್‌ಸ್ಟ್ಯಾಡ್ ಪತ್ತೆಮಾಡಿದರು. ವಾಸ್ತವವಾಗಿ ರೂಪಾಂತರ ಶಿಲೆಯ ಕೆಲವು ಭಾಗಗಳು ಲಾವಾರಸದಿಂದ ಆದವುಗಳಲ್ಲ. ಅವು ಒಂದು ರೀತಿಯ ಸಮುದ್ರದ ಮಡ್ಡಿಯಿಂದಾದವುಗಳು. ಈ ಶಿಲೆಗಳನ್ನು ದಿಂಬಿನ ಲಾವಾಶಿಲೆಗಳೆನ್ನುತ್ತಾರೆ.

**ದಿಂಬುಶಿಲೆ (ಪಿಲ್ಲೊಲಾವಾ)**

ಕೆ.ಜಿ.ಎಫ್. ನಿಂದ ಮಾರಿಕುಪ್ಪಂ ರಸ್ತೆಯಲ್ಲಿ ಸುಮಾರು ಏಳು ಕಿ.ಮೀ. ದೂರದಲ್ಲಿ ದಿಂಬುಶಿಲೆ (ಪಿಲೊಲಾವಾ) ಕಂಡುಬಂದಿದೆ. ಅದರ ವಯಸ್ಸು ಸುಮಾರು ೨೫೦ ಕೋಟಿ ವರ್ಷಗಳು. ಇದರ ಉಗಮ ಸಮುದ್ರ ದಾಳದಲ್ಲಿ ಆಗಿದ್ದು, ಇದೇ ತರಹದ ಶಿಲೆ ಚಿತ್ರದುರ್ಗ ಜಿಲ್ಲೆಯಲ್ಲೂ ಕಂಡುಬಂದಿದೆ. ಮಾರಿಕುಪ್ಪಂ ಪ್ರದೇಶದಲ್ಲಿ ಸುಮಾರು ೧೨ ಕಿ.ಮೀ. ವ್ಯಾಪ್ತಿಯಲ್ಲಿ ಈ ಶಿಲೆಯು ಹರಡಿದ್ದು, ಇದನ್ನು 'ರಾಷ್ಟ್ರೀಯ ಭೂ ವೈಜ್ಞಾನಿಕ ಸ್ಮಾರಕ' ಎಂದು ಘೋಷಿಸಲಾಗಿದೆ.

**ಬೆಟ್ಟಗಳು**

ಕರ್ನಾಟಕದ ಪ್ರಸ್ಥಭೂಮಿಯ ಅಂಚಿನ ಭಾಗವಾಗಿರುವ ಕೋಲಾರ ಜಿಲ್ಲೆಯ ಎಲ್ಲೆಗಳು ಈಶಾನ್ಯ ಮತ್ತು ದಕ್ಷಿಣದಲ್ಲಿ ಪೂರ್ವಘಟ್ಟಗಳ ಬೆಟ್ಟಶ್ರೇಣಿಯನ್ನು ಸ್ಪರ್ಶಿಸುತ್ತವೆ. ಜಿಲ್ಲೆಯಲ್ಲಿ ಗುಡಿಬಂಡೆ, ಎಲ್ಲೋಡು ಬೆಟ್ಟ, ಆದಿನಾರಾಯಣ ಬೆಟ್ಟ, ನಂದಿಯ ಪಂಚಗಿರಿಗಳು, ಕೈವಾರ–ಚಿಂತಾಮಣಿಯ ಬೆಟ್ಟಗಳು, ಕೋಲಾರದ ಶತಶೃಂಗ ಪರ್ವತಗಳು, ಟೇಕಲ್ ಬೆಟ್ಟಗಳು, ದೇವರಾಯ ಸಮುದ್ರ, ಆವನಿ, ಮುಳಬಾಗಿಲು, ಕುರುಡುಮಲೆ ಮುಂತಾದ ಬೆಟ್ಟ ಸಾಲುಗಳಿವೆ.

ಚಿಕ್ಕಬಳ್ಳಾಪುರ ತಾಲೂಕಿನ ನಂದಿದುರ್ಗದಿಂದ ಉತ್ತರದೆಡೆ ಗುಡಿಬಂಡೆಯ ಮೂಲಕ ಹಾಯುವ ಜಿಲ್ಲೆಯ ಪ್ರಮುಖ ಬೆಟ್ಟಗಳ ಶ್ರೇಣಿಯು ಆಂಧ್ರಪ್ರದೇಶದ ಪೆನುಗೊಂಡೆಯೆಡೆಗೆ ದಕ್ಷಿಣೋತ್ತರವಾಗಿ ಹಬ್ಬಿದೆ. ಬೆಂಗಳೂರು ನಗರದಿಂದ ಉತ್ತರಕ್ಕೆ ೫೦ ಕಿ.ಮೀ ದೂರದಲ್ಲಿರುವ ನಂದಿದುರ್ಗ (ಎತ್ತರ ೧,೪೭೮ ಮೀ.), ಚಿಕ್ಕಬಳ್ಳಾಪುರದ ಆಗ್ನೇಯಕ್ಕೆ ಎಂಟು ಕಿ.ಮೀ. ದೂರದಲ್ಲಿರುವ ಚೆನ್ನರಾಯನ ಬೆಟ್ಟ(೧,೪೫೧ ಮೀ.), ನಂದಿದುರ್ಗದ ಉತ್ತರಕ್ಕೆ ಎಂಟು ಕಿ.ಮೀ. ದೂರದಲ್ಲಿರುವ ಸ್ಕಂದಗಿರಿ (೧,೪೪೭ ಮೀ.), ನಂದಿದುರ್ಗದ ಆಗ್ನೇಯ ದಿಕ್ಕಿನಲ್ಲಿರುವ ಬ್ರಹ್ಮಗಿರಿ (೧,೪೧೯ ಮೀ.), ನಂದಿದುರ್ಗದ ಉತ್ತರಕ್ಕಿರುವ ಹರಿಹರೇಶ್ವರ ಬೆಟ್ಟ (೧,೨೫೬ ಮೀ.), ಇವು ನಂದಿದುರ್ಗ ಶ್ರೇಣಿಯ ಕೆಲವು ಮುಖ್ಯ ಶಿಖರಗಳಾಗಿವೆ.

ಈ ಬೆಟ್ಟಗಳ ಶ್ರೇಣಿಗೆ ಸಮಾನಾಂತರದಲ್ಲಿ ಸುಮಾರು ೫೦ ರಿಂದ ೬೫ ಕಿ.ಮೀ. ಪೂರ್ವಕ್ಕೆ ಬೆಟ್ಟಗಳ ಇನ್ನೊಂದು ಶ್ರೇಣಿಯಿದೆ. ಇದು ಆಂಧ್ರಪ್ರದೇಶದ ಕಡೆಯಿಂದ ಹಬ್ಬಿರುವ ಶ್ರೇಣಿಯಾಗಿದ್ದು ಜಿಲ್ಲೆಯಲ್ಲಿ ಗುಮ್ಮನಾಯಕನ ಪಾಳ್ಯದ ಉತ್ತರದಲ್ಲಿ ದೊಂಗಲಕೊಂಡ ಅಥವಾ ದೊಕ್ಕಲದುರ್ಗದ ಬಳಿ ಆರಂಭವಾಗಿ, ದಕ್ಷಿಣಾಭಿಮುಖವಾಗಿ ಸಾಗುತ್ತದೆ. ಈ ಬೆಟ್ಟಗಳ ಶ್ರೇಣಿಯು ಚಿತ್ರಾವತಿ ಮತ್ತು ಪಾಪಾಘ್ನಿಯ ಜಲಾನಯನಗಳನ್ನು ಬೇರ್ಪಡಿಸುತ್ತದೆ. ಮುಂದೆ ಇದು ಇಳಿಜಾರಾಗಿದ್ದು, ಮತ್ತೆ ಮುರುಗಮಲೆ, ಅಂಬಾಜಿದುರ್ಗ (೧,೩೪೧ ಮೀ.), ರಹಮಾನ್‌ದುರ್ಗ (೧,೩೦೪ ಮೀ.) ಮುಂತಾದ ಏಕಾಂಗಿ ಬೆಟ್ಟಗಳು ಕಾಣಿಸಿಕೊಳ್ಳುತ್ತವೆ. ಆನಂತರ ಈ ಶ್ರೇಣಿಯು ಕೋಲಾರ ನಗರದ ಪಶ್ಚಿಮದಿಂದ (ಗರಿಷ್ಟ ಎತ್ತರ ೧,೨೦೮ಮೀ) ಮತ್ತೆ ಅವಿರತವಾಗಿ ದಕ್ಷಿಣದಲ್ಲಿ ವಕ್ಕಲೇರಿ ಮತ್ತು ಟೇಕಲ್ ಬೆಟ್ಟಗಳವರೆಗೂ ಮುಂದುವರೆಯುತ್ತದೆ.

ಇನ್ನೊಂದು ಕೆಳಮಟ್ಟದ ಶ್ರೇಣಿಯು ಶ್ರೀನಿವಾಸಪುರದ ಬಳಿ ಆರಂಭವಾಗಿ ಕೋಲಾರ ಪಟ್ಟಣದ ಪೂರ್ವಕ್ಕೆ ಸಾಗಿ, ಬಂಗಾರಪೇಟೆಯ ದಕ್ಷಿಣಾಗ್ರವನ್ನು ಹಾಯ್ದು ಕುಪ್ಪಂ ಕಡೆಯ ಘಟ್ಟದವರೆಗೂ ಮುಂದುವರೆಯುತ್ತದೆ. ಇದರ ಇನ್ನೂ ಪೂರ್ವಕ್ಕೆ ಮುದಿಮಗಡು ಮತ್ತು ಸುಣ್ಣಕಲ್ ಬಳಿ ಬಾಗಿರುವ ವೃತ್ತಾಕಾರದ ಕೆಲವು ಬೆಟ್ಟಗಳಿವೆ.

ಜಿಲ್ಲೆಯ ಮಧ್ಯ ಮತ್ತು ಪೂರ್ವದ ಭಾಗಗಳು ಪಾಲಾರ್ ನದಿ ಕಣಿವೆಯ ಪ್ರದೇಶಗಳಾಗಿದ್ದು, ಏರುತಗ್ಗುಗಳಿಂದ ಕೂಡಿ ಕೃಷಿಗೆ ಯೋಗ್ಯವಾಗಿದೆ. ಸಾಮಾನ್ಯವಾಗಿ ಈ ಪ್ರದೇಶವು ಕೊಲಾರದ ಬಳಿ ಸಮುದ್ರಮಟ್ಟದಿಂದ ೮೩೬ ಮೀ, ಮಾಲೂರಿನ ಬಳಿ ೮೯೧ಮೀ ಮತ್ತು ಅಂಬಾಜಿದುರ್ಗದ ಬಳಿ ೮೯೭ ಮೀ ಎತ್ತರವಾಗಿದೆ. ಉತ್ತರಪಿನಾಕಿನಿ ನದಿ ಕಣಿವೆಯು, ಗೌರಿಬಿದನೂರಿನೆಡೆ ಗಮನಾರ್ಹವಾಗಿ ಇಳಿಮುಖವಾಗಿದೆ.

**ಕೆರೆಗಳು**

ಕೋಲಾರ, ಜಿಲ್ಲೆಯಲ್ಲಿ ಗಂಗರ ಹಾಗೂ ಚೋಳರ ಕಾಲದಿಂದಲೂ ಜನಸಮುದಾಯದ ಒಳಿತಿಗಾಗಿ 'ಕೆರೆಯಿಂದ ಕೆರೆಗೆ' ಎಂಬ ತತ್ವದ ಮೇಲೆ ಕೆರೆಗಳು ನಿರ್ಮಾಣಗೊಂಡಿದ್ದವು. ಒಂದು ಕೆರೆ ತುಂಬಿ ಕೋಡಿ ಹರಿದು ಮತ್ತೊಂದು ಕೆರೆಗೆ ನೀರು, ಹರಿದು ಬರುವಂತೆ ಜಾಲ ಏರ್ಪಾಡಾಗಿತ್ತು. ಆದರೆ ಇಂದು ಅನೇಕ ಕೆರೆಗಳು ಮಾಯವಾಗಿ ಕೆರೆ ಕೊಂಡಿಗಳು ಸಂಪೂರ್ಣ ಕಾಣದಾಗಿದೆ.

ರೈಸ್ ಸಂಕಲಿಸಿದ ಗ್ಯಾಸೆಟಿಯರ್‌ನಲ್ಲಿ ದಾಖಲಾಗಿರುವಂತೆ ಪಾಲಾರ್ ಮತ್ತು ಉತ್ತರಪಿನಾಕಿನಿ ನದಿಗಳ ಶೇಕಡ ೮೫ ಕ್ಕೂ ಹೆಚ್ಚು ನೀರನ್ನು ಕೋಲಾರ ಜಿಲ್ಲೆಯಲ್ಲಿ ನೀರಾವರಿಗಾಗಿ ಬಳಸಿಕೊಳ್ಳಲಾಗುತ್ತಿತ್ತು. ನಂದಿದುರ್ಗದ ಮೇಲಿನಿಂದ ಸರ್ವೇಕ್ಷಣೆ ಮಾಡಿದಾಗ ಜಿಲ್ಲೆಯ ೪೦೦ಕ್ಕೂ ಹೆಚ್ಚು ಕೆರೆಗಳ ನೋಟವನ್ನು ಕಾಣಬಹುದಾಗಿತ್ತು. ಆಗ ಜಿಲ್ಲೆಯಲ್ಲಿ ಒಟ್ಟು ೫,೪೯೭ ಕೆರೆಗಳಿದ್ದು, ಅವುಗಳು ೪೮,೬೦೦ ಹೆಕ್ಟೇರುಗಳಿಗೆ ನೀರಾವರಿಯನ್ನು ಒದಗಿಸಿದ್ದವು.

ಕೋಲಾರ ಮತ್ತು ಬಂಗಾರಪೇಟೆ ತಾಲೂಕುಗಳಲ್ಲಿ, ಪಾಲಾರ್ ನದಿಗೆ ಅಡ್ಡಲಾಗಿ ಸೋಮಾಂಬುದಿ, ಜನ್ನಘಟ್ಟ, ಮುದವಾಡಿ, ಚೆಲ್ಲಪಲ್ಲಿ, ಮಣಿಘಟ್ಟ, ಬೇತಮಂಗಲ ಮತ್ತು ರಾಮಸಾಗರ ಕೆರೆಗಳ ಸರಣಿಯಿದೆ. ಕೆರೆಗಳ ನಡುವಿನ ಅಂತರ ಸರಾಸರಿ ೫ ರಿಂದ ಏಳು ಕಿ.ಮೀ. ಆಗಿದೆ. ಕೋಲಾರ, ನಂಗಲಿ ಮತ್ತು ಕುರುಬೂರು ಕೆರೆಗಳು ಇದೇ ಸರಣಿಗೆ ಸೇರುತ್ತವೆ. ರಾಮಸಾಗರ ಕೆರೆಯು ಜಿಲ್ಲೆಯಲ್ಲಿರುವ ಅತಿ ದೊಡ್ಡ ಕೆರೆಯಾಗಿದೆ. ಶ್ರೀನಿವಾಸಪುರ ತಾಲೂಕಿನ ಬಾಗವಾಡು ಕೆರೆಯ ಅಚ್ಚುಕಟ್ಟು ೨೪೯ ಹೆ., ರೋನೂರು ೧೧೩ ಹೆ., ಕೊಳತೂರು ೬೧ ಹೆ. ಮತ್ತು ಲಕ್ಷ್ಮಣಸಾಗರ ೯೨ ಹೆ. ಅಚ್ಚುಕಟ್ಟು ಹೊಂದಿರುವ ಕೆರೆಗಳಾಗಿವೆ.

ದಕ್ಷಿಣ ಪಿನಾಕಿನಿ ನದಿಗೆ ಆಡ್ಡಲಾಗಿ ಚಿಕ್ಕಬಳ್ಳಾಪುರ ತಾಲೂಕಿನಲ್ಲಿರುವ ಕಂದಾವರ ಮತ್ತು ಗೋಪಾಲಕೃಷ್ಣ ಕೆರೆಗಳಿಂದ ಕ್ರಮವಾಗಿ ೨೫೩ ಹೆ ಮತ್ತು ೨೯೦ ಹೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಇದೇ ತಾಲೂಕಿನ ಕಾಟಮಾಚನಹಳ್ಳಿ ಕೆರೆಯು ೨೧೯ ಹೆ ಪ್ರದೇಶಕ್ಕೆ ನೀರಾವರಿ ಒದಗಿಸುತ್ತದೆ. ಗೋಪಾಲಕೃಷ್ಣ ಕೆರೆಯ ಹೆಚ್ಚುವರಿ ನೀರನ್ನು ಶಿಡ್ಲಘಟ್ಟದ ಅಮಾನಿಕೆರೆಗೆ ಮತ್ತು ಬೆಲೂಟಿ ಕೆರೆಗೆ ಬಿಡಲಾಗುತ್ತದೆ.

ಉತ್ತರಪಿನಾಕಿನಿ ಮತ್ತು ಅದರ ಉಪನದಿಗಳಾದ ಚಿತ್ರಾವತಿ ಮತ್ತು ಪಾಪಾಘ್ನಿ ನದಿಗಳು ಅನೇಕ ಕೆರೆಗಳಿಗೆ ನೀರಿನ ಮೂಲಗಳಾಗಿವೆ. ಗುಡಿಬಂಡೆಯ ಬೈರಸಾಗರ ಕೆರೆಯು ಜಿಲ್ಲೆಯ ದೊಡ್ಡ ಕೆರೆಗಳಲ್ಲಿ ಒಂದಾಗಿದೆ. ಗುಡಿಬಂಡೆ ತಾಲೂಕಿನಲ್ಲಿ ವಾಟದಹೊಸಹಳ್ಳಿ, ಹುದುಗೂರು, ನಗರಗೆರೆ ಮತ್ತು ನಾಮಗೊಂಡ್ಲು ಕೆರೆಗಳು ಪ್ರಮುಖವಾಗಿವೆ. ಗೌರಿಬಿದನೂರಿನ ನೈಋತ್ಯಕ್ಕಿರುವ ಪೂರ್ಣಸಾಗರ ಕೆರೆ ಮತ್ತು ಚಿತ್ರಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಪೆರಿಯಸಂದ್ರ ಕೆರೆಗಳು ಸಹ ಪ್ರಮುಖವಾಗಿವೆ. ಜಿಲ್ಲೆಯಲ್ಲಿರುವ ಕೆರೆಗಳ ಪಟ್ಟಿಯನ್ನು ಅಧ್ಯಾಯದ ಕೊನೆಯಲ್ಲಿ ನೀಡಿದೆ.

**ಕೆರೆ ನಿರ್ವಹಣಾ ಯೋಜನೆ, ಕೋಲಾರ:** ಕರ್ನಾಟಕ ರಾಜ್ಯದಲ್ಲಿರುವ ೩೬,೦೦೦ ಕ್ಕೂ ಅಧಿಕ ಕೆರೆಗಳಲ್ಲಿ ಬಹುತೇಕ ಕೆರೆಗಳು ನೂರಿನ್ನೂರು ವರ್ಷಗಳಷ್ಟು ಹಳೆಯವು. ಪ್ರಸ್ತುತ ಕೆರೆಗಳ ಜಲಾನಯನ ಪ್ರದೇಶದಲ್ಲಿ ಪರಿಸರ ನಾಶ, ಪೋಷಕ ನಾಲೆಗಳ ಅತಿಕ್ರಮಣ, ಕೆರೆಯಂಗಣದಲ್ಲಿ ತುಂಬಿರುವ ಹೂಳು, ಶಿಥಿಲಗೊಂಡಿರುವ ಏರಿ, ತೂಬು, ಕೋಡಿ ಮತ್ತು ನಾಲೆಗಳು ಮುಂತಾದ

ಕಾರಣಗಳಿಂದಾಗಿ ಅಚ್ಚುಕಟ್ಟಿಗೆ ನೀರುಣಿಸುವ ಕ್ಷಮತೆ ಗಣನೀಯವಾಗಿ ಇಳಿಮುಖವಾಗಿರುವುದು ಕಂಡುಬಂದಿದೆ. ಈ ಬೆಳವಣಿಗೆ ಕೇವಲ ನೀರಾವರಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಮಾತ್ರವಲ್ಲದೆ ಗ್ರಾಮೀಣ ಪ್ರದೇಶದಲ್ಲಿನ ಉದ್ಯೋಗಾವಕಾಶಗಳು, ಪರಿಸರ ಮತ್ತು ಅಂತರ್ಜಲ ಮಟ್ಟದ ಕುಸಿತಕ್ಕೆ ಕಾರಣವಾಗಿದೆ. ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿ ನಿರ್ವಹಿಸಿಕೊಂಡು ಹೋಗುವ ನಿಟ್ಟಿನಲ್ಲಿ ಸಮುದಾಯಗಳ ಸಹಭಾಗಿತ್ವ ಮಹತ್ವದ್ದಾಗಿದೆ. ಈ ನಿಟ್ಟಿನಲ್ಲಿ, ಸರ್ಕಾರವು 'ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆ'ಯನ್ನು ವಿಶ್ವಬ್ಯಾಂಕಿನ ನೆರವಿನೊಂದಿಗೆ ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯನ್ನು ನಿಗದಿತ ಕಾಲಮಿತಿಯಲ್ಲಿ ಯೋಜಿಸಿ ಕಾರ್ಯಗತಗೊಳಿಸಲು ಸರ್ಕಾರವು ಜಲಸಂವರ್ಧನೆ ಯೋಜನಾ ಸಂಘ (ಜಸಂಯೋಸಂ)ವನ್ನು ರಚಿಸಿ ಕಾರ್ಯಗತಗೊಳಿಸಿದೆ.

ಸಮುದಾಯ ಆಧಾರಿತ ಪ್ರಯತ್ನಗಳ ಮೂಲಕ, ಕೆರೆ ವ್ಯವಸ್ಥೆಯನ್ನು ನಿರ್ವಹಿಸಲು ಅವಶ್ಯವಿರುವ ಸಮುದಾಯದ ಸಾಮರ್ಥ್ಯವನ್ನು ಬಲಪಡಿಸುವುದು ಹಾಗೂ ತನ್ಮೂಲಕ ಗ್ರಾಮೀಣ ಜನರ ಜೀವನ ಮಟ್ಟವನ್ನು ಸುಧಾರಿಸುವುದು, ಯೋಜನೆಯ ಪ್ರಮುಖ ಗುರಿಯಾಗಿದೆ. ಈ ಯೋಜನಾ ಪ್ರದೇಶವು ರಾಜ್ಯದ ೯ ಜಿಲ್ಲೆಗಳ ೩೪ ತಾಲೂಕುಗಳನ್ನು ಒಳಗೊಂಡಿದೆ. ಇದರಲ್ಲಿ ಕೋಲಾರ ಜಿಲ್ಲೆಯಲ್ಲಿರುವ ೧,೦೨೪ ಕೆರೆಗಳು ಸೇರಿವೆ (ಕೋಲಾರ ತಾ॥ ೧೬೫; ಮಾಲೂರು ತಾ॥ ೧೩೨; ಚಿಂತಾಮಣಿ ತಾ॥ ೨೦೩; ಮುಳಬಾಗಲು ತಾ॥ ೨೭೦; ಬಾಗೇಪಲ್ಲಿ ತಾ॥ ೧೪೯; ಶಿಡ್ಲಘಟ್ಟ ತಾ॥ ೬೦ ಮತ್ತು ಗುಡಿಬಂಡೆ ತಾ॥ ೩೫). ೨೦೦೩–೦೪ನೇ ಸಾಲಿನಲ್ಲಿ ೨೩೧ ಕೆರೆಗಳ ಕಾಮಗಾರಿಗಳ ವಿವಿಧ ಹಂತಗಳಲ್ಲಿ ಅನುಷ್ಠಾನಗೊಳ್ಳುತ್ತಿದ್ದವು.

ಕೆರೆಗಳು ಕರ್ನಾಟಕ ಸರ್ಕಾರದ ಆಸ್ತಿಯಾಗಿದ್ದು, ಕೆರೆಗಳ ನಿರ್ವಹಣೆ ಮತ್ತು ನೀರಿನ ಶುಲ್ಕ ವಸೂಲಿ ಸರಕಾರಿ ಇಲಾಖೆಗಳ ಜವಾಬ್ದಾರಿಯಾಗಿದೆ. ಕೆರೆಗಳ ಪುನಶ್ಚೇತನ ಕೆಲಸ ಪೂರ್ಣಗೊಂಡ ಮೇಲೆ, ಕೆರೆಗಳ ಮೇಲ್ವಿಚಾರಣೆ, ಉಸ್ತುವಾರಿ, ನಿರ್ವಹಣೆಯ ಜವಾಬ್ದಾರಿಯನ್ನು ಸಮುದಾಯಗಳಿಗೆ ವಹಿಸಲಾಗುವುದು. ಸಮುದಾಯಗಳೇ ನೀರಿನ ಶುಲ್ಕವನ್ನು ವಿಧಿಸಿ, ಸಂಗ್ರಹಿಸಿದ ಮೊತ್ತದ ಶೇ. ೯೦ರಷ್ಟನ್ನು ಮತ್ತು ಕೆರೆಯಿಂದ ಬರುವ ಇನ್ನಿತರ ಆದಾಯಗಳನ್ನು ಭವಿಷ್ಯದಲ್ಲಿ ಕೆರೆಗಳ ನಿರ್ವಹಣೆಗಾಗಿ ಉಪಯೋಗಿಸಲಾಗುವುದು. ಕೆರೆಯು ಕೇವಲ ಅಚ್ಚುಕಟ್ಟುದಾರನಿಗೆ ಸೇರಿರದೆ ಇಡೀ ಗ್ರಾಮದ ಸಮುದಾಯಕ್ಕೆ ಸೇರಿರುತ್ತದೆ. ಆದುದರಿಂದ, ಇಡೀ ಹಳ್ಳಿ ಅಥವಾ ಗ್ರಾಮಸಭೆಯನ್ನು ಯೋಜನೆಯಲ್ಲಿ ತೊಡಗಿಸಿ, ಕೆರೆಗಳ ಸುಧಾರಣೆಗೆ ಬೇಕಾದ ಅನುದಾನವನ್ನು, ನೇರವಾಗಿ ಸಮುದಾಯಕ್ಕೆ ಕೊಡಲಾಗುವುದು. ಕೆರೆ ಸುಧಾರಣೆಗೆ ಯಾವ ಕೆಲಸಗಳನ್ನು ಕೈಗೊಳ್ಳಬೇಕೆಂಬುದನ್ನು ಸಮುದಾಯವೇ ನಿರ್ಣಯಿಸುವುದು.

ಯೋಜನೆಯ ಅಡಿಯಲ್ಲಿ ತಮ್ಮ ಹಳ್ಳಿಯ ಕೆರೆಯನ್ನು ಪುನಶ್ಚೇತನಗೊಳಿಸಬೇಕಾದರೆ, ಸಮುದಾಯವೇ ಆ ಬಗ್ಗೆ ನಿರ್ಣಯಿಸಬೇಕು. ಈ ಕೆಳಕಂಡ ಅಂಶಗಳಿಗೆ ತಮ್ಮ ಕೆರೆ ಒಳಪಟ್ಟಿದ್ದರೆ ಯೋಜನೆಯೊಂದಿಗೆ ಸಹಭಾಗಿತ್ವ ಹೊಂದಬಹುದಾಗಿದೆ. ೧. ಕೆರೆಗಳು ನೀರಾವರಿ ಕೆರೆಗಳಾಗಿರಬೇಕು; ೨. ಕಳೆದ ಹತ್ತು ವರ್ಷಗಳಲ್ಲಿ ಒಂದೆರಡು ಬಾರಿಯಾದರೂ ಕೆರೆ ಕೋಡಿ ಹರಿದಿರಬೇಕು; ೩. ಯೋಜನೆಯನ್ನು ತೆಗೆದುಕೊಳ್ಳುವ ಸಮ್ಮತಿ ಇದೆ ಎಂದು ತೋರಿಸುವ ಗ್ರಾಮ ಸಭೆಯ ನಿರ್ಣಯಕ್ಕೆ ಇಡೀ ಸಮುದಾಯವು ಸಹಿ ಮಾಡಿರಬೇಕು; ೪. ತಮ್ಮ ಕೆರೆ ಅಭಿವೃದ್ಧಿಗೆ ತಗಲುವ ಒಟ್ಟು ಮೊತ್ತದ ಕನಿಷ್ಟ ಶೇಕಡ ೧೨ ರಷ್ಟನ್ನು ಸಮುದಾಯವು ಕೊಡಲು ಒಪ್ಪಬೇಕು ; ೫. ಯಾವುದೇ ಕೆರೆಯು ಬೃಹತ್ ಅಥವಾ ಮಧ್ಯಮ ನೀರಾವರಿ ಯೋಜನೆಯ ಕಾಲುವೆಗಳಿಂದ ಪೋಷಿತವಾಗಿರಕೂಡದು ; ೬. ಖಾಸಗಿ ಕೆರೆಗಳಾಗಿ ಇರಬಾರದು ; ೭. ಅಚ್ಚುಕಟ್ಟು ಪ್ರದೇಶದಲ್ಲಿ ಬಹುತೇಕ ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರು ಇರಬೇಕು ; ೮. ಕೆರೆ ಅಚ್ಚುಕಟ್ಟು ಪ್ರದೇಶವು ನಾಲ್ಕು ಹೆಕ್ಟೇರಿಗಿಂತ ಕಡಿಮೆ ಇರಬಾರದು ಹಾಗೂ ೩,೦೦೦ ಹೆಕ್ಟೇರ್ ಹೆಚ್ಚಾಗಿರಬಾರದು ಎಂಬ ನಿಬಂಧನೆಗಳನ್ನು ನಿರೂಪಿಸಲಾಗಿದೆ.

ಸಮುದಾಯವೇ ಈ ಯೋಜನೆಯನ್ನು ಅನುಷ್ಠಾನಗೊಳಿಸುವುದರಿಂದ ಅವರೇ ಯೋಜನೆಯ ಸಹಭಾಗಿಗಳಾಗಿರುವರು. ಅಚ್ಚುಕಟ್ಟುದಾರರಲ್ಲದೇ, ಜಲಾನಯನ ಪ್ರದೇಶದ ರೈತರು, ಭೂರಹಿತರು, ಮಹಿಳೆಯರು, ಮೀನುಗಾರರು ಮತ್ತು ಹಿಂದುಳಿದ ವರ್ಗದವರು ಈ ಯೋಜನೆಯಲ್ಲಿದ್ದು ಇವರನ್ನೆಲ್ಲಾ ಒಳಗೊಂಡ ಸಾಂಸ್ಥಿಕ ವ್ಯವಸ್ಥೆಯು ಯೋಜನೆಯನ್ನು ಕಾರ್ಯಾಚರಣೆಗೆ ತರುವ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತದೆ.

ಯೋಜನೆಯನ್ನು ಕಾರ್ಯಗತಗೊಳಿಸುವ ಸಲುವಾಗಿ ಗ್ರಾಮೀಣ ಸಮುದಾಯಕ್ಕೆ ಮಾರ್ಗದರ್ಶನ ನೀಡಲು, ಸ್ಥಳೀಯ ಸರ್ಕಾರೇತರ ಸಂಸ್ಥೆಗಳ ಮುಖಾಂತರ ಸಮೂಹ ಮಾರ್ಗದರ್ಶನ ತಂಡಗಳನ್ನು ರಚಿಸಲಾಗಿದೆ. ಕೆರೆ ಅಭಿವೃದ್ಧಿ ಸಂಘವು ಮೇಲ್ಕಂಡ ತಂಡದೊಂದಿಗೆ ವಿಚಾರ ವಿನಿಮಯ ಮಾಡಿ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಯತ್ನಿಸುವುದು.

**ಖನಿಜ ನಿಕ್ಷೇಪಗಳು**

**ಚಿನ್ನ :** ಕರ್ನಾಟಕದಲ್ಲಿ ಚಿನ್ನವು ಧಾರವಾಡ ಪದರಶಿಲೆಗಳ ಬೆಣಚು ಸಿರಗಳಲ್ಲಿ ಸಿಗುತ್ತದೆ. ಆ ಸಿರಗಳಲ್ಲಿ ಚಿನ್ನವು ಅತಿ ಸೂಕ್ಷ್ಮ ಕಣಗಳ ರೂಪದಲ್ಲಿದೆ. ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿರುವ ಧಾರವಾಡ ಪದರ ಶಿಲಾ ಹರವು ಸುಮಾರು ೮೦ ಕಿ.ಮೀ. ಉದ್ದ ಮತ್ತು ೬.೪ ಕಿ.ಮೀ. ಅಗಲವಿದೆ. ಆದರೆ ಚಿನ್ನವಿರುವ ಉದ್ದದ ಭಾಗವು ಸುಮಾರು ೭.೨ ಕಿ.ಮೀ. ಮಾತ್ರವಿದೆ. ಈ ಭಾಗದಲ್ಲಿ ಚಿನ್ನ ನಿಕ್ಷೇಪದ ಸುಮಾರು ೩೦ ಪ್ರತ್ಯೇಕ ಬೆಣಚು ಸಿರಗಳಿವೆ ಇವುಗಳಲ್ಲಿ 'ಛಾಂಪಿಯನ್ ಲೋಡ್' ಸಿರ ಅತಿ ಮುಖ್ಯವಾದುದು. ಚಿನ್ನಭರಿತ ಬೆಣಚು ಸಿರಗಳೆಲ್ಲವೂ ಸಾಮಾನ್ಯವಾಗಿ ಉತ್ತರ–ದಕ್ಷಿಣಾಭಿಮುಖವಾಗಿ ಹರಡಿವೆ. ಮೈಸೂರು ಗಣಿ, ಛಾಂಪಿಯನ್ ರೀಫ್ ಗಣಿ, ಉರಿಗಮ್ ಗಣಿ ಮತ್ತು ಬಾಲಘಾಟ್ ಗಣಿಗಳು ಪ್ರಮುಖವಾದ ಗಣಿಗಳಾಗಿವೆ. ಕೋಲಾರ ಚಿನ್ನದ ಗಣಿಗಳಲ್ಲಿ ಚಿನ್ನದೊಂದಿಗೆ ಬೆರೆತು, ಬೆಳ್ಳಿಯು ಅಲ್ಪ ಪ್ರಮಾಣದಲ್ಲಿ ದೊರೆಯುತ್ತಿತ್ತು. ಇಲ್ಲಿ ಬೇರ್ಪಡಿಸಿ ಪಡೆಯಲಾಗುತ್ತಿರುವ ಬೆಳ್ಳಿಯ ಪ್ರಮಾಣವು ವರ್ಷಕ್ಕೆ ೨೦ ರಿಂದ ೨೫ ಸಾವಿರ ಔನ್ಸಗಳಷ್ಟಾಗುತ್ತಿತ್ತು. ೧೯೪೩ ರಿಂದ ಬೆಳ್ಳಿಯ ಉತ್ಪತ್ತಿಯು ಗಣನೀಯವಾಗಿ ಕಡಿಮೆಯಾಗಿದೆ. ಪ್ರಸ್ತುತ ಗಣಿಗಾರಿಕೆಯನ್ನು ನಿಲ್ಲಿಸಲಾಗಿದೆ.

**ಕುರಂದ (Corundum):** ಬಂಗಾರಪೇಟೆಗೆ ದಕ್ಷಿಣಕ್ಕೆ ಸುಮಾರು ಒಂದು ಕಿ.ಮೀ. ದೂರದಲ್ಲಿರುವ ದೊಡ್ಡೇರಿಯ ಬಳಿ ಅಲ್ಲಲ್ಲಿ ಕುರಂದದ ಕೆಲವು ಬಿಡಿ ನಿಕ್ಷೇಪಗಳು ಕಂಡುಬಂದಿವೆ. ಇವುಗಳಲ್ಲಿ ಕುರಂದವು ಸ್ಥಳೀಯ ಕಣಶಿಲಾಹರವಿನಲ್ಲಿ ಮಸೂರಾಕೃತಿಯಲ್ಲಿಯೂ, ಚಿಕ್ಕ ಚಿಕ್ಕ ಪಟ್ಟೆಗಳಂತೆಯೂ ಹಾಗೂ ಅಭ್ರಕ– ಕಾರ್ಡಿಯರೈಟ್– ಸಿಲ್ಲಿಮನೈಟ್ ಪದರ ಶಿಲಾಭಾಗಗಳಲ್ಲಿ ದೊಡ್ಡ ದೊಡ್ಡ ಹರಳುಗಳಾಗಿಯೂ ಹರಡಿರುವುದು ತಿಳಿದುಬಂದಿದೆ.

**ಕಯನೈಟ್ –** ಬಂಗಾರಪೇಟೆ ತಾಲೂಕಿನ ಸಾಕರ್ಸನಹಳ್ಳಿ, ದೊಡ್ಡೇರಿ, ಕಾಮಸಮುದ್ರಗಳ ಸಮೀಪದಲ್ಲಿ ಸಿಲ್ಲಿಮನೈಟ್, ಕಾರ್ಡಿಯರೈಟ್‌ನೊಂದಿಗೆ ಕುರಂದ ಸಹಿತ ಅಥವಾ ಕುರಂದ ರಹಿತ ಕಯನೈಟ್ ನಿಕ್ಷೇಪಗಳು ಕಂಡುಬಂದಿವೆ. ಈ ಪ್ರದೇಶಗಳಲ್ಲಿರುವ ಕೆಲವು ಉರುಟು ಬಂಡೆಗಳಲ್ಲಿ ಖನಿಜಗಳು ಶೇಖರಿಸಲ್ಪಟ್ಟಿರುವುದು ಕಂಡುಬರುತ್ತದೆ.

**ಕಾವಿ ಮಣ್ಣು (Ochres) :** ಕೋಲಾರ, ಮುಳಬಾಗಿಲು ಮತ್ತು ಶ್ರೀನಿವಾಸಪುರ ತಾಲೂಕುಗಳಲ್ಲಿ ಅಲ್ಲಲ್ಲಿ ಬಿಳಿ ಛಾಯೆಯ ನಸುಹಳದಿ ಬಣ್ಣದ ಕಾವಿಮಣ್ಣಿನ ಚಿಕ್ಕಚಿಕ್ಕ ನಿಕ್ಷೇಪಗಳಿವೆ.

**ಫೆಲ್ಡ್‌ಸ್ಪಾರ್:** ಪೊಟ್ಯಾಸಿಯಂ ಫೆಲ್ಡ್‌ಸ್ಪಾರ್ ಇರುವ ಪೆಗ್ಮಟೈಟ್ ಸಿರಗಳು ಜಿಲ್ಲೆಯ ತೊಂಡೇಭಾವಿ ಮತ್ತು ಕಾಮಸಮುದ್ರದ ಬಳಿ ಇರುವುದಾಗಿ ತಿಳಿದುಬಂದಿದೆ.

**ಗ್ರಾಫೈಟ್:** ಬಂಗಾರಪೇಟೆ ತಾಲೂಕಿನ ಗಣಾಚಾರಪುರದ ಬಳಿ, ಕೋಲಾರದ ಚಿನ್ನದ ಗಣಿಗೆ ಎಂಟು ಮೈಲಿ ವಾಯುವ್ಯಕ್ಕೆ ಅಸ್ಪಟಿಕ ಗ್ರಾಫೈಟ್‌ನ ದೊಡ್ಡ ನಿಕ್ಷೇಪವಿರುವುದು ಕಂಡುಬಂದಿದೆ. ಈ ಗ್ರಾಫೈಟ್ ನಿಕ್ಷೇಪದಲ್ಲಿ ಶೇ.೧೨ ಭಾಗದಷ್ಟು ಇಂಗಾಲವಿರುತ್ತದೆ. ಈ ಪ್ರದೇಶದಲ್ಲಿರುವ ಗ್ರಾಫೈಟ್ ನಿಕ್ಷೇಪಗಳು ಉದ್ದವಾಗಿ ಮಸೂರಾಕೃತಿಯಲ್ಲಿವೆ. ಈ ನಿಕ್ಷೇಪಗಳು, ಸೂಕ್ಷ್ಮಕಣಗಳ ಕರಿಬೂದಿ ಬಣ್ಣದ ಗ್ರಾಫೈಟ್‌ನಿಂದೊಡಗೂಡಿರುತ್ತವೆ. ಅವು ಅನುಕ್ರಮವಾಗಿ, ಫಿಲ್ಲಿಟಿಕ್ ಪದರಶಿಲೆ ಮತ್ತು ಫೆರುಜಿನಸ್ ಕ್ವಾರ್ಟ್ಸೈಟ್ (ಕಬ್ಬಿಣ ಸಿಕತ ಪದರಶಿಲೆ) ಗಳ ರೂಪದಲ್ಲಿ ಸ್ಥಳೀಯ ಗ್ರಾನೈಟ್ ಶಿಲಾವರ್ಗದಿಂದ ಸುತ್ತುವರಿದಿವೆ.

**ಸಸ್ಯಸಂಪತ್ತು**

ಜಿಲ್ಲೆಯಲ್ಲಿರುವ ಕೆರೆಗಳು, ಬಾವಿಗಳು, ನದಿಗಳು ಮತ್ತು ಹೊಳೆಗಳು ಇಲ್ಲಿ ಸಸ್ಯಸಂಪತ್ತಿನ ಅಭಿವೃದ್ಧಿಗೆ ಅಪಾರ ಕೊಡುಗೆಯನ್ನು ನೀಡಬೇಕಿತ್ತು. ಆದರೆ, ವಾರ್ಷಿಕ ಸರಾಸರಿ ಮಳೆಯ ಪ್ರಮಾಣ ಕಡಿಮೆಯಾಗಿದ್ದು ವರ್ಷದಲ್ಲಿ ಬಹುತೇಕ

ತಿಂಗಳುಗಳಲ್ಲಿ ನದಿಗಳು ಮತ್ತು ಹೊಳೆಗಳು ನೀರಿಲ್ಲದೆ, ಸಸ್ಯಸಂಪತ್ತಿನ ಕೊರತೆಗೆ ಕಾರಣವಾಗಿದೆ. ಜಿಲ್ಲೆಯಲ್ಲಿನ ನಿವ್ವಳ ಬಿತ್ತನೆ ಪ್ರದೇಶದ ಶೇ ೮೦ ಕ್ಕಿಂತ ಅಧಿಕ ಭಾಗ ಮಳೆಯನ್ನೇ ಅವಲಂಬಿಸಿದೆ.

ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶ ೮,೨೨,೩೦೦ ಹೆಕ್ಟೇರುಗಳಾಗಿದ್ದು ಅದರಲ್ಲಿ ಅರಣ್ಯ ಪ್ರದೇಶವು ೧,೦೩,೯೪೧ ಹೆಕ್ಟೇರುಗಳಾಗಿದೆ. ಇದು ಜಿಲ್ಲೆಯ ಭೌಗೋಳಿಕ ವಿಸ್ತೀರ್ಣದ ಶೇ ೧೨.೬೪ ರಷ್ಟಿದೆ. ೨೦೦೩–೦೪ ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ೮೭೭.೯೩ ಚಕಿ.ಮೀ ಮೀಸಲು ಅರಣ್ಯ, ೪೩.೩೧ ಚಕಿ.ಮೀ ರಕ್ಷಿಸಲ್ಪಟ್ಟ ಅರಣ್ಯ, ೬೧.೫೬ ಚಕಿ.ಮೀ ಪ್ರದೇಶದಲ್ಲಿ ವರ್ಗೀಕರಿಸದ ಅರಣ್ಯ ಮತ್ತು ೫೬.೬೧ ಚಕಿ.ಮೀ ಗ್ರಾಮಾಂತರ ಅರಣ್ಯ ಪ್ರದೇಶವಿದೆ. ಜಿಲ್ಲೆಯು ಬಹುತೇಕ ಎಲೆ ಉದುರುವ ಕಾಡು ಹಾಗೂ ಕುರುಚಲು ಗಿಡಗಳಿಂದ ಆವೃತವಾಗಿದೆ. ಹೀಗಾಗಿ ಇಲ್ಲಿನ ಗುಡ್ಡಗಾಡು ಪ್ರದೇಶದ ಹವಾಗುಣ ಮತ್ತು ಮಣ್ಣಿನ ಗುಣದಿಂದಾಗಿ ಒಣ ಎಲೆಯುದುರುವ ಅಥವಾ ಕುರುಚಲು ಮತ್ತು ಮುಳ್ಳುಗಿಡಗಳಿರುವ ಅರಣ್ಯಗಳನ್ನು ಕಾಣಬಹುದು. ಮರಗಳು ಕುಬ್ಜವಾಗಿದ್ದು ಮೇಲ್ಛಾವಣಿ ಹರಡಿರುತ್ತದೆ. ಉರುವಲು ಮತ್ತು ಇದ್ದಲಿನ ಬಳಕೆಗಾಗಿ ಅರಣ್ಯಗಳನ್ನು ಆಶ್ರಯಿಸುವುದರಿಂದ ರಕ್ಷಿತ ಅರಣ್ಯ ಪ್ರದೇಶಗಳಲ್ಲಿ ಮರಗಳು ಅತಿ ವಿರಳವಾಗಿದ್ದು ಅರಣ್ಯಗಳ ಲಕ್ಷಣಗಳನ್ನು ಕಳೆದುಕೊಂಡಿವೆ. ಭಾರತದ ಅರಣ್ಯ ಸರ್ವೇಕ್ಷಣಾ ವರದಿಯಂತೆ, ಜಿಲ್ಲೆಯಲ್ಲಿನ ಅರಣ್ಯ ಪ್ರದೇಶವು ಭೌಗೋಳಿಕ ಪ್ರದೇಶದ ಶೇ ೧೩.೩೩ ರಷ್ಟಿದ್ದು, ಅರಣ್ಯದ ಆಚ್ಛಾದನೆ ಕೇವಲ ಶೇ ೫.೦೧ ರಷ್ಟಿದೆ. ಇನ್ನುಳಿದ ಶೇ ೮.೩೨ ರಷ್ಟು ಪ್ರದೇಶದಲ್ಲಿ ಅರಣ್ಯೀಕರಣವಾಗಬೇಕಾಗಿದೆ. ಬಹುತೇಕ ಅರಣ್ಯ ಪ್ರದೇಶ ಗುಡ್ಡಗಾಡು ವಲಯಕ್ಕೆ ಸೀಮಿತವಾಗಿದ್ದು, ಗುಡ್ಡಗಳ ನಡುವಿನ ಕಣಿವೆ ಪ್ರದೇಶವನ್ನು ಒತ್ತುವರಿ ಮಾಡಿ ಕೃಷಿ ಭೂಮಿಯನ್ನಾಗಿ ಮಾರ್ಪಡಿಸಲಾಗಿದೆ. ಜೊತೆಗೆ ಗುಡ್ಡಗಾಡು ಪ್ರದೇಶದ ನೊರಜುಕಲ್ಲು ಮಿಶ್ರಿತ ಭೂಮಿಯು ಉತ್ತಮ ಅರಣ್ಯ ಮರಗಳ ಬೆಳವಣಿಗೆಗೆ ಅಡ್ಡಿಯಾಗಿದೆ. ಜಿಲ್ಲೆಯಲ್ಲಿ ವಿವಿಧ ಮಾದರಿಯ ಅರಣ್ಯ ನೆಡುತೋಪುಗಳನ್ನು ಬೆಳೆಸಲು ವ್ಯಾಪಕ ಅವಕಾಶಗಳಿದ್ದು, ಅದರಂತೆ ಇಲಾಖೆಯು ಉರುವಲು ಮತ್ತು ಫಲ ನೀಡುವ ನೆಡುತೋಪುಗಳನು ಬೆಳೆಸಲು ಕ್ರಮ ಕೈಗೊಂಡಿದೆ.

ಜಿಲ್ಲೆಯ ನಂದಿದುರ್ಗ ಪ್ರದೇಶದಲ್ಲಿ ಸಸ್ಯಸಂಪತ್ತು ವಿಪುಲವಾಗಿದೆ. ಉಳಿದ ಗುಡ್ಡಪ್ರದೇಶಗಳಲ್ಲಿ ವಿರಳವಾದ ಸಸ್ಯಸಂಪತ್ತನ್ನು ಕಾಣಬಹುದು. ಜಿಲ್ಲೆಯಲ್ಲಿ ಕಂಡುಬರುವ ಸಸ್ಯಗಳ ಪಟ್ಟಿಯನ್ನು ಮುಂದೆ ನೀಡಿದೆ.

| ಸಸ್ಯದ ಹೆಸರು | ವೈಜ್ಞಾನಿಕ ಹೆಸರು | ಸಸ್ಯದ ಹೆಸರು | ವೈಜ್ಞಾನಿಕ ಹೆಸರು |
|---|---|---|---|
| **ಕರಿಜಾಲಿ/ಬಾಬುಲ್** | Acacia arabica | **ನಲ್ಲ ಹಲಸು** | Canthium didymm |
| **ಕಗ್ಗಲಿ** | Acacia catechu | **ತಂಗಡಿ** | Cassia auriculata |
| **ಬನ್ನಿ** | Acacia ferruginea | **ಕಕ್ಕೆ** | Cassia fistula |
| **ಬಿಳಿ ಜಾಳಿ** | Acasia leucophloea | **ಸೀಮೆ ತಂಗಡಿ** | Cassia siamia |
| **ಬಿಲ್ವಪತ್ರೆ** | Aegle marmelos | **ಸರ್ವೆ ಮರ** | Casuarina equestifolia |
